ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

## ದಿನಾಂಕ: 31-07-2022 ರಂದು ನಡೆದ ಸೌಂದರ್ಯನಗರ ಕ್ಷೇಮಾಭಿವೃದ್ಧಿ ಸಂಘದ "18ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳು"

18ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ನೋಟಿಸಿನಂತೆ ಬೆಳಗ್ಗೆ 10-00 ಗಂಟೆಗೆ ಸೇರಿತ್ತು. ಆದರೆ ಅಗತ್ಯ ಸದಸ್ಯರ ಹಾಜರಾತಿ/ಕೋರಂ ಇಲ್ಲದ ಕಾರಣ ಸಭೆಯನ್ನು ಸಂಘದ ಬೈಲಾದ ನಿಯಮ 8.3 ರಂತೆ ಕೆಲಕಾಲ ಮುಂದೂಡಿ ನಂತರ ಬೆಳಗ್ಗೆ 11-00 ಗಂಟೆಗೆ ಅಗತ್ಯ ಸದಸ್ಯರ ಹಾಜರಾತಿಯೊಂದಿಗೆ/ಕೋರಂನೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳೊಂದಿಗೆ ಪ್ರಾರಂಭಿಸಲಾಯಿತು.

ನಿರೂಪಣೆ: ಶ್ರೀ. ಕಾರ್ತಿಕ್ ಬೋಜರಾಜ್ ರವರು ಈ ಸಭೆಯ ನಿರೂಪಣೆ ಮಾಡಿದರು.

1. **ಓಂಕಾರ :** ಸರ್ವ ಸದಸ್ಯರ ಸಭೆಯು ಓಂಕಾರದೊಂದಿಗೆ ಪ್ರಾರಂಭಿಸಲಾಯಿತು.

2. **ದೀಪ ಬೆಳಗುವಿಕೆ :** ಸಭೆಯನ್ನು ದೀಪ ಬೆಳಗಿಸುವಿಕೆಯ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

3. **ಪ್ರಾರ್ಥನೆ :** ಮಾಸ್ಟರ್. ಸರ್ವಜಿತ್ ಭಟ್ ರವರು ದೇವರ ಪ್ರಾರ್ಥನೆಮಾಡಿದರು.

4. **ಸ್ವಾಗತ ಭಾಷಣ :** ಸಭೆಗೆ ಆಗಮಿಸಿದ್ದ ಸಂಘದ ಸದಸ್ಯರನ್ನು ಶ್ರೀ. ಕಾರ್ತಿಕ್ ಬೋಜರಾಜ್‌ರವರು ಸ್ವಾಗತಿಸಿದರು.

5. **ಶ್ರದ್ಧಾಂಜಲಿ:** 2021-2022ನೇ ಸಾಲಿನಲ್ಲಿ ನಮ್ಮನ್ನು ಅಗಲಿದ ಬಡಾವಣೆಯ ನಿವಾಸಿಗಳಿಗೆ, ರಾಜ್ಯ ಮತ್ತು ದೇಶದ ಗಣ್ಯರಿಗೆ ಒಂದು ನಿಮಿಷದ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

6. **ಲೆಕ್ಕ ಪತ್ರದ ವರದಿ :** ಸಂಘದ ಖಜಾಂಚಿಗಳಾದ ಸುಹಾಸ್.ಎಸ್.ಕೌಶಿಕ್ ರವರು 2021-22ನೇ ಸಾಲಿನ ಲೆಕ್ಕಪರಿಶೋಧಕರ ವರದಿ ಮತ್ತು ಆಯ-ವ್ಯಯ ಪತ್ರವನ್ನು ಓದಿ ವಿವರಿಸಿದರು ಮತ್ತು ಸಭೆಯ ಅನುಮೋದನೆಗಾಗಿ ಮಂಡಿಸಿದರು :-

**:: ಲೆಕ್ಕ ಪರಿಶೋಧಕರ ವರದಿಯ ಮೇಲೆ ಈ ಕೆಳಗಿನ ವಿಸ್ತೃತ ಚರ್ಚೆ ನಡೆಯಿತು ::**

ಸದಸ್ಯರು ಲೆಕ್ಕ ಪರಿಶೋಧಕರ ವರದಿಯಲ್ಲಿನ ವಿಶೇಷ ಟಿಪ್ಪಣಿ ನಂ. 1 ರಲ್ಲಿ ನಮೂದಿಸಿದ ಸಂಘದ ಹೆಸರಿನಲ್ಲಿದ್ದ ಸೌಂದರ್ಯ ಕ್ಯಾಶ್ ಸರ್ಟಿಫಿಕೆಟ್‌ನ ಠೇವಣಿ ಹಣ ರೂ. 10,14,000/- ಗಳನ್ನು ಮಾಜಿ ಅಧ್ಯಕ್ಷರಾದ ಶ್ರೀ.ಮೂಡಲಗಿರಿಯಪ್ಪ ಮತ್ತು ಶ್ರೀ. ಮಂಜಪ್ಪ ನವರ ಜಂಟಿ ಹೆಸರಿಗೆ ಹಸ್ತಾಂತರಿಸಿ ಅವರ ಹೆಸರಿನಲ್ಲಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದರಿಂದ, ಈ ಹಣವನ್ನು ಮಾಜಿ ಅಧ್ಯಕ್ಷರಾದ ಶ್ರೀ. ಮೂಡಲಗಿರಿಯಪ್ಪರವರಿಗೆ ನೀಡಿದ ಸಾಲವೆಂದು ಪರಿಗಣಿಸಲಾಗಿದೆ ಎಂದು ನಮೂದಿಸಲಾಗಿದೆ. ಅಲ್ಲದೇ, ಈ ನಿಶ್ಚಿತ ಠೇವಣಿಯು ದಿನಾಂಕ : 08-03-2022 ರಂದೇ ಮೆಚುರ್ ಆಗಿದ್ದು ಈ ವರೆಗೂ ಸಂಘದ ಖಾತೆಗೆ ಬಂದಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ವಿಶೇಷ ಟಿಪ್ಪಣಿ ನಂ. 2 ರಲ್ಲಿ ನಮೂದು ಮಾಡಿದ ಸಂಘದ

ಸಂಖ್ಯೆ.........
ದಿನಾಂಕ......

ರಸೀದಿ ಪುಸ್ತಕಗಳ ಸಂಖ್ಯೆ: 31 ಮತ್ತು 32 (ವೋಚರ್ ನಂ. 3001–3200) ಗಳನ್ನು ಸಂಘದ ಆಡಳಿತ ಮಂಡಳಿಯು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿಲ್ಲವಾದ್ದರಿಂದ ಇವುಗಳ ಬಗ್ಗೆ ಯಾವುದೇ ವ್ಯಾಖ್ಯಾನ/ವಿಶ್ಲೇಷಣೆ ನೀಡಲು ಸಾಧ್ಯವಿಲ್ಲ ಎಂಬ ಈ ಮೇಲಿನ ಎರಡು ಟಿಪ್ಪಣೆಗಳ ಬಗ್ಗೆ ಚರ್ಚೆ ಅಗತ್ಯವಿದೆ ಎಂದು ಸದಸ್ಯರ ಆಶಯದಂತೆ ಈ ಕೆಳಗಿನಂತೆ ಚರ್ಚಿಸಲಾಯಿತು :-

- ಸಂಘದ ಮಾಜಿ ಖಾಜಾಂಜಿಗಳಾಗಿದ್ದ ಶ್ರೀ. ಯುವರಾಜ್: ಈ ಮೇಲಿನ ಎರಡು ರಸೀದಿ ಪುಸ್ತಕ ಸಂಖ್ಯೆ: 31 ಮತ್ತು 32 ಇವುಗಳು ಶ್ರೀ. ಮಂಜಪ್ಪನವರ ಹತ್ತಿರ ಇದೆ ಮತ್ತು ನಿಶ್ಚಿತ ಠೇವಣಿಯಲ್ಲಿದ್ದ ರೂ.10,14,000/- ಗಳನ್ನು ದೇವಸ್ಥಾನಕ್ಕೆ ದೇಣಿಗೆಯಾಗಿ ಕೊಡಲಾಗಿದೆಯೆಂದು ಸಭೆಗೆ ತಿಳಿಸಿದರು.

- ಅರುಣ್ ಮರಾಠೆ : ಅಷ್ಟು ದೊಡ್ಡ ಮೊತ್ತವನ್ನು ಹೇಗೆ ಇಬ್ಬರ ವೈಯಕ್ತಿಕ ಹೆಸರಿಗೆ ಹಸ್ತಾಂತರಿಸಲಾಯಿತು? ನಮ್ಮ ಬೈಲಾನಲ್ಲಿ ಈ ಬಗ್ಗೆ ಅಧಿಕಾರವಿದೆಯೆ ?
- ಅಧ್ಯಕ್ಷರು : ಸಂಘದಿಂದ ಯಾವುದೇ ವ್ಯಕ್ತಿಗಳಿಗೆ ಸಾಲ ಕೊಡಲು ಸೊಸೈಟಿ ಕಾಯ್ದೆಯಲ್ಲಾಗಲಿ ಅಥವಾ ನಮ್ಮ ಸಂಘದ ಬೈಲಾದಲ್ಲಾಗಲಿ ಅವಕಾಶವಿಲ್ಲ.

- ಅರುಣ್ ಮರಾಠೆ : ಈ ರೂ. 10 ಲಕ್ಷ ಸಂಘದ ಖಾತೆಗೆ ಹೇಗೆ ಬಂತು ?
- ಅಧ್ಯಕ್ಷರು : ನಮ್ಮ ಬಡಾವಣೆಯಲ್ಲಿನ ನಿವೇಶನಗಳಿಗೆ ಸಂಬಂಧಿಸಿದಂತೆ ಕೆಲವು ಕಾನೂನು ತೊಡಕುಂಟಾದಾಗ ಅದರ ನಿವಾರಣೆಗಾಗಿ ತೊಂದರೆಗೊಳಗಾದ ಪ್ರತೀ ನಿವೇಶನದಾರರಿಂದ ರೂ. 25,000/- ಗಳನ್ನು ಪಡೆದು ಅಗತ್ಯ ದಾಖಲೆ ಪತ್ರಗಳನ್ನು ಮಾಡಿಕೊಟ್ಟ ನಂತರ ಉಳಿದ ಹಣವನ್ನು ಶೇಖರಿಸಿ ರೂ. 8,96,400/- ಗಳನ್ನು ಸೌಂದರ್ಯ ಸೌಹಾರ್ದ ಬ್ಯಾಂಕ್ ನಲ್ಲಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿತ್ತು, ಆ ಹಣಕ್ಕೆ ಬಡ್ಡಿ ಸೇರಿ ಒಟ್ಟು ರೂ. 10,14,000/- ಗಳಾಗಿತ್ತು.

- ಅರುಣ್ ಮರಾಠೆ : ನಿವೇಶನದಾರರ ಸಮಸ್ಯೆ ನಿವಾರಣೆಗಾಗಿ ಸೈಟ್ ಕಮಿಟಿ ರಚನೆಯಾಗಿದ್ದಾಗ ಹಣವನ್ನು ಸಂಘದ ಹೆಸರಿಗೆ ಏಕೆ ಮತ್ತು ಹೇಗೆ ಜಮಾ ಮಾಡಿದ್ರು ?
- ಅಧ್ಯಕ್ಷರು : ಸೈಟ್ ಕಮಿಟಿಯು ಹಣಕೊಟ್ಟ ಎಲ್ಲಾ ನಿವೇಶನದಾರರ ಸಭೆ ಕರೆದಿದ್ದರು, ಆ ಸಭೆಗೆ ಶ್ರೀ.ಮಂಜಪ್ಪ ನವರು ಸಹ ಬಂದಿದ್ದರು. ಆ ಸಭೆಯ ಅನುಮೋಧನೆ ಪಡೆದು ಉಳಿದ ಹಣವನ್ನು ದೇವಸ್ಥಾನಕ್ಕೆ ಕೊಡಲು ಅನುಮೋಧನೆ ಮಂಡಿಸಿದರು, ಅದರಲ್ಲಿ 3-4 ಸದಸ್ಯರನ್ನು ಹೊರತು ಪಡಿಸಿ ಉಳಿದವರು ಏನನ್ನು ಮಾತನಾಡದ ಕಾರಣ ತದನಂತರ ಆ ಉಳಿದ ಹಣವನ್ನು ಸಂಘದ ಹೆಸರಿನಲ್ಲಿ ಖಾತೆ ತೆರೆದು ಆ ಖಾತೆಗೆ ಹಾಕಿರಬಹುದು. ಈ ಹಣ ಸಂಘದ ಹೆಸರಿನ ಖಾತೆಗೆ ಬರಲೇಬಾರದಿತ್ತು, ಇದಕ್ಕಾಗಿ ಬೇರೊಂದು ಖಾತೆ ತೆರೆದು (ಕಮಿಟಿಯ ಹೆಸರಿನಲ್ಲಿ ಯಾ ದೇವಸ್ಥಾನದ ಹೆಸರಿನಲ್ಲಿ) ಇಡಬೇಕಿತ್ತು. ಸಂಘದ ಹೆಸರಿನಲ್ಲಿ ಖಾತೆ ತೆರೆದು ನಿಶ್ಚಿತ ಠೇವಣಿ ಇಟ್ಟಿದ್ದು ತೊಂದರೆಯಾಗಿದೆ.

- ಅರುಣ್ ಮರಾಠೆ : ನ್ಯಾಷನಲ್ ಹೆರಾಲ್ಡ್ ಕೇಸ್ ತರ ಆಗಿದೆ, ಇದು ಸರಿಯಲ್ಲ.
- ಯುವರಾಜ್ : ಹಣ ದುರುಪಯೋಗವಾಗಿಲ್ಲ ಎಂದರು.
- ಈ ಸಂದರ್ಭದಲ್ಲಿ ಅಧ್ಯಕ್ಷರು ಇಬ್ಬರನ್ನು ಸಮಾದಾನ ಮಾಡಿ, ಅವರು ಉದಾಹರಣೆ ಕೊಟ್ಟು ವಿವರಣೆ ಕೇಳಿದ್ದಾರೆ ಅಷ್ಟೆ ಎಂದರು.

- ಮಂಗಳ ವರ್ಷಿ : ಈಗ ನಾವು ಕೊಟ್ಟಿರುವ ಹಣ ವಾಪಸ್ ಮಾಡಿ ಎಂದರು.
- ಅಧ್ಯಕ್ಷರು : ಈಗ ಹಣ ವಾಪಸ್ ಬೇಕು ಎಂದರೆ ಹೇಗೆ, ಸೈಟ್ ಕಮಿಟಿಯವರು ಸಭೆ ಕರೆದಾಗ ಸುಮಾರು 60-65 ಭಾದಿತ ಸದಸ್ಯರು ಬಂದಿದ್ದರು, 3-4 ಸದಸ್ಯರನ್ನು ಹೊರತುಪಡಿಸಿ ಉಳಿದವರು ಸುಮ್ಮನೆ ಇದ್ದರು,

ಸಂಖ್ಯೆ........
ದಿನಾಂಕ........

ಉಳಿದ ಹಣವನ್ನು ದೇವಸ್ಥಾನಕ್ಕೆ ಉಪಯೋಗಿಸಲು ಅನುಮೋದನೆ ಕೇಳಿದಾಗ ಯಾರು ತಕರಾರು ತೆಗೆಯಲಿಲ್ಲ ಎಲ್ಲರೂ ಸುಮ್ಮನೆ ಇದ್ದರು. ನಂತರ ಆ ಹಣ ಸಂಘದ ಖಾತೆಗೆ ಬಂದಿದೆ.

- ಸುಬ್ಬಣ್ಣ : ಇದರಿಂದ ಸಂಘಕ್ಕೆ ಕೆಟ್ಟ ಹೆಸರು ಬರುತ್ತದೆ.
- ಅಧ್ಯಕ್ಷರು : ಸಂಘದ ಈ ಹಿಂದಿನ ಲೆಕ್ಕಪರಿಶೋಧಕರ ವರದಿಯಲ್ಲೂ ಈ ಸಂಬಂದ ವರದಿಮಾಡಿದ್ದಾರೆ ರೂ. 10,14,000/- ಗಳು ವಿಥ್‌ಡ್ರಾ ಮಾಡಿದ್ದಾರೆ ಆ ನಂತರ ಶ್ರೀ. ಮೂಡಲಗಿರಿಯಪ್ಪ ಮತ್ತು ಮಂಜಪ್ಪ ನವರ ಜಂಟಿ ಹೆಸರಲ್ಲಿ ಹಣ ಹೂಡಿಕೆ ಮಾಡಲಾಗಿದೆ ಎಂದು ಆಗ ಸುಮ್ಮನಿದ್ದು ಈಗ ಕೇಳಿದರೆ ಹೇಗೆ?

- ಮಂಜುನಾಥ್ ಭಟ್ : ತಪ್ಪುಮಾಡಿದ್ದಾರೆ ಮತ್ತು ಅನ್ಯಾಯವಾಗಿದೆ, ಸರ್ವೆ ನಂಬರು ಸರಿ ಮಾಡಿಕೊಡಲು ಒಪ್ಪಿಕೊಂಡು ಬಲವಂತವಾಗಿ ರೂ. 10,14,000/- ಗಳನ್ನು ಕಿತ್ತುಕೊಂಡಂತಾಗಿದೆ, ಅಲ್ಲದೇ ಈ ಹಣದೊಂದಿಗೆ ಬಡ್ಡಿ ಹಣವು ಸೇರಿ ಸಂಘಕ್ಕೆ ಸೇರಬೇಕಾಗಿದ್ದ ಹಣ ಏಕಪಕ್ಷೀಯ ನಿರ್ಧಾರದಿಂದ ಸಂಘದ ಖಾತೆಯಿಂದ ತೆಗೆದಿದ್ದಾರೆ, ಅಲ್ಲದೇ, ಸಂಘದ 2 ರಸೀದಿ ಪುಸ್ತಕಗಳು ಕೂಡ ಇಲ್ಲ ಎಂದು ವರದಿಯಾಗಿದೆ, ಅಂದರೆ ಅದರಲ್ಲಿ ಏನೇನು ಇದೆ, ಅವು ಹೇಗೆ ಕಾಣೆಯಾದವು, ಇದಕ್ಕೆ ಯಾರು ಜವಾಬ್ದಾರರು ? ಸಂಘಕ್ಕೆ ಬರಬೇಕಾದ ಬಡ್ಡಿ ಹಣ ಮತ್ತು ರಸೀದಿ ಪುಸ್ತಕದ ಬಗ್ಗೆ ಚರ್ಚೆ ಯಾಗಲಿ, ಏಕೆಂದರೆ ಬಡ್ಡಿಹಣದಮೇಲೆ ಸಂಘ ಟಿ.ಡಿ.ಎಸ್. ಕಟ್ಟಿದೆ.
- ಅಧ್ಯಕ್ಷರು : ಹೌದು ಲೆಕ್ಕಪರಿಶೋಧಕರ ವರದಿಯ ಪ್ರಕಾರ ಠೇವಣಿ ಮೇಲಿನ ಬಡ್ಡಿ ಹಣಕ್ಕೆ ಸಂಘ ಟಿ.ಡಿ.ಎಸ್. ಕಟ್ಟಿದೆ ಮತ್ತು ರಸೀದಿ ಪುಸ್ತಕಗಳು ಸಂಘದ ಆಸ್ತಿಗಳಾಗಿವೆ.

- ಯುವರಾಜ್ : ಠೇವಣಿ ಮತ್ತು ಬಡ್ಡಿ ಹಣ ಮತ್ತು ರಸೀದಿ ಪುಸ್ತಕಗಳ ಬಗ್ಗೆ ಶ್ರೀ.ಮಂಜಪ್ಪನವರನ್ನು ಕರೆದು ಚರ್ಚೆ ಮಾಡೋಣ ಅವರ ತೀರ್ಮಾನಕ್ಕೆ ಬದ್ಧರಾಗೋಣ.
- ಮಂಜುನಾಥ್ ಭಟ್ : ರಸೀದಿ ಪುಸ್ತಕಗಳ ಬಗ್ಗೆ ಸ್ಪಷ್ಟನೆ ಬೇಕು.
- ಅಧ್ಯಕ್ಷರು : ಸಂಘಕ್ಕೆ ಎಷ್ಟು ಬಡ್ಡಿ ದುಡ್ಡಿನ ಮೇಲೆ ಅಧಿಕಾರವಿದೆ ಎಂದು ಲೆಕ್ಕಪರಿಶೋಧಕರ ಬಳಿ ಚರ್ಚಿಸಿ ಸ್ಪಷ್ಟನೆ ಪಡೆದುಕೊಳ್ಳುತ್ತೇವೆ. ಸಂಘದ ಖಾತೆಯಿಂದ ಡ್ರಾ ಮಾಡಿದ ಹಣದ ಬಗ್ಗೆ ಮತ್ತು ರಸೀದಿ ಪುಸ್ತಕಗಳ ಬಗ್ಗೆ ಹಿಂದಿನ ಸಂಘದ ಪದಾಧಿಕಾರಿಗಳಿಂದ ವಿವರಣೆ ಮತ್ತು ಉತ್ತರ ಪಡೆದುಕೊಳ್ಳುತ್ತೇವೆ.

- ಮಂಜುನಾಥ್ ಭಟ್ : ರೂ. 8,96,400/- ಮತ್ತು ಬಡ್ಡಿಯೊಂದಿಗೆ ರೂ. 4,000/- ಗಳು ಸಂಘದ ಹಣವು ಹೋಗಿದೆ.
- ಅಧ್ಯಕ್ಷರು : ನಮ್ಮ ಲೆಕ್ಕಪರಿಶೋಧಕರ ಹತ್ತಿರ ಈ ಬಗ್ಗೆ ಚರ್ಚೆ ಮಾಡಿ ತಿಳಿಸುತ್ತೇವೆ.

- ಸುಬ್ಬಣ್ಣ : ಹಿಂದಿನ ಅಧ್ಯಕ್ಷರ ಹೆಸರಿಗೆ ಹಣ ಏಕೆ ಹೋಯ್ತು ? ಈ ಹಿಂದೆ ಸ್ವಜಲಧಾರ ವಿಷಯದಲ್ಲಿ ಅಂದಿನ ಸಂಘದ ಅಧಿಕಾರಿಗಳು ಹಣಕೊಟ್ಟವರಿಗೆ ರಸೀದಿ ನೀಡಿದ್ದರು, ಇವರೇಕೆ ರಸೀದಿ ಕೊಡಲಿಲ್ಲ ?
- ಯುವರಾಜ್ : ಹಳೇ ರಸೀದಿ ಪುಸ್ತಕಗಳು ಮಾಜಿ ಅಧ್ಯಕ್ಷರ ಹತ್ತಿರ ಇದೆ ಕೊಡ್ತಾರೆ.
- ಮಂಜುನಾಥ್ ಭಟ್ : ಲೆಕ್ಕಪರಿಶೋಧಕರ ವರದಿಯಲ್ಲಿ ಬ್ರೆಕ್ ಅಪ್ ಇಲ್ಲ, ಹೊಸ ಮತ್ತು ಹಳೆ ಸದಸ್ಯರ ಬಗ್ಗೆ ಸ್ಪಷ್ಟತೆ ಇಲ್ಲ.
- ಅಧ್ಯಕ್ಷರು : ಲೆಕ್ಕಪರಿಶೋಧಕರ ಹತ್ತಿರ ಈ ಬಗ್ಗೆ ಚರ್ಚಿಸಿ ತಪ್ಪಿದ್ದರೆ ಸರಿಪಡಿಸಿ ರೆವೈಸ್ಡ್ ಆಡಿಟ್ ರಿಪೋರ್ಟ್ ಕೊಡಲು ಕೇಳುತ್ತೇವೆ.

- ಮಂಜುನಾಥ್ ಭಟ್ : ಸಂಘದ ಬೈಲಾ ಮತ್ತು ಸೊಸೈಟಿ ಕಾನೂನಿನ ಪ್ರಕಾರ ಕೆಲವು ಪ್ರೊಸಿಝರ್ ನಡುವಳಿಕೆಗಳಿವೆ. ಚುನಾವಣೆ ಪ್ರಕಟವಾದ ನಂತರ ಸಂಘದ ಅಧಿಕಾರಿಗಳು ಕೇವಲ ಸಂಘದ ಕೇರ್ ಟೇಕರ್ ಗಳು

ನಾರಾಯಣನಗರ ಕ್ಷೇಮಾಭಿವೃದ್ಧಿ ಸಂಘ ಸಂಖ್ಯೆ........ ದಿನಾಂಕ...... ಬೆಂ-73

ಮಾತ್ರ. ಅವರು ಸಂಘದ ಹಣವನ್ನು ಯಾವುದೇ ರೀತಿಯಲ್ಲಿಯೂ ವರ್ಗಾವಣೆ ಮಾಡಬಾರದು, ಹಿಂದಿನ ಪದಾಧಿಕಾರಿಗಳು ಸಂಘಕ್ಕೆ ಮೋಸ ಮಾಡಿದ್ದಾರೆ, ಇವರು ಯಾವುದೇ ನಿಯಮಗಳನ್ನು ಪಾಲನೆ ಮಾಡಿಲ್ಲ.

- ಸುಬ್ಬಣ್ಣ : ಸಂಘದ ಹೆಸರಲ್ಲಿ ಈ ತರಹದ ಕಾರ್ಯಗಳನ್ನು ಮಾಡಿ ಸದಸ್ಯರಿಗೆ ತೊಂದರೆ ಮಾಡಬಾರದಿತ್ತು, ಮನಸ್ಸಿಗೆ ತುಂಬಾ ಬೇಜಾರಾಗಿದೆ.

- ಅಧ್ಯಕ್ಷರು : ಹಿಂದಿನ ಪದಾಧಿಕಾರಿಗಳ ಜೋತೆ ಚರ್ಚಿಸಿ ರಸೀದಿ ಪುಸ್ತಕದ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತೇವೆ ಮತ್ತು ನಿಮಗೆ ತಿಳಿಸುತ್ತೇವೆ. ಹಾಗೆಯೇ, ನಾವು ಈ ಮೂಲಕ ಭರವಸೆ ನೀಡುತ್ತೇವೆ ಪ್ರಸ್ತುತ ಪದಾಧಿಕಾರಿಗಳ ಅಧಿಕಾರಾವಧಿಯಲ್ಲಿ ಯಾವುದೇ ಕಾರಣಕ್ಕೆ ಹಣಕಾಸಿನ ವಿಚಾರದಲ್ಲಿ ಯಾವುದೇ ತಪ್ಪುಗಳಾಗದಂತೆ ಜಾಗ್ರತೆ ವಹಿಸುತ್ತೇವೆ ಮತ್ತು ಯಾವುದೇ ಲೋಪಗಳಾಗದಂತೆ ನೋಡಿಕೊಳ್ಳುತ್ತೇವೆ.

- ಮಂಜುನಾಥ್ ಭಟ್ : ಒಂದೊಂವ್ಮೆ ಮೊತ್ತದಲ್ಲಿ/ಫಿಗರ್ ಚೆಂಜ್ ಆದ್ರೆ ಏನ್ಮಾಡ್ತೀರ ? ನೀವು ಹೇಗೆ ಅದರ ಪರಿಣಾಮಗಳನ್ನು ಎದುರಿಸುತ್ತೀರಿ ?

- ಅಧ್ಯಕ್ಷರು : ವ್ಯತ್ಯಾಸಗಳಾದರೆ ಆ ಬಗ್ಗೆ ಲೆಕ್ಕ ಪರಿಶೋಧಕರ ಹತ್ತಿರ ಚರ್ಚೆ ಮಾಡಿ ಸಂಘಕ್ಕೆ ಯಾವುದೇ ತರಹದ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು. ನಂತರ ಅಗತ್ಯ ಬಿದ್ದರೆ ಸ್ಪೆಷಲ್ ಜನರಲ್ ಬಾಡಿ ಮೀಟಿಂಗ್ ಕರೆಯುತ್ತೇವೆ.

- ಸುಬ್ಬಣ್ಣ : ನಮಗೆ ನೋಂದಣಿ ಮಾಡಿಕೊಟ್ಟ ಕನ್ಫರ್ಮೆಶನ್ ಡೀಡ್ ಬಗ್ಗೆ ಚರ್ಚೆ ಮಾಡಬೇಕಾಗಿದೆ.

- ಮಂಜುನಾಥ್ ಭಟ್ : ನಮಗೆ ಕನ್ಫರ್ಮೆಶನ್ ಡೀಡ್ ಮಾಡಿಕೊಡುವಾಗ ನೋಂದಣಿ ಪತ್ರದ ಜೋತೆ ಅಲ್ಲಿಯವರೆಗಿನ ಇ. ಸಿ. ಕೊಡುತ್ತೇವೆ ಎಂದು ಹೇಳಿದ್ರು, ಅಲ್ಲದೇ ನಮ್ಮ ಬಡಾವಣೆಗೆ ಸಂಬಂದಿಸಿದ ಎಲ್ಲಾ ಮೂಲ ದಾಖಲೆಪತ್ರಗಳನ್ನು ಸಂಘದ ಸ್ವಾಧೀನಕ್ಕೆ ಕೊಡುತ್ತೇನೆಂದು ಶ್ರೀ. ಮಂಜಪ್ಪನವರು ಹೇಳಿದ್ದರು. ಏನಾಯ್ತು?

- ಅಧ್ಯಕ್ಷರು : ಬಡಾವಣೆಯ ಎಲ್ಲಾ ಮೂಲ ಪತ್ರಗಳನ್ನು ಸಂಘಕ್ಕೆ ಕೊಡುತ್ತೇನೆ ಎಂದು ಹೇಳಿದ್ದರು, ಈ ಬಗ್ಗೆ ಅವರನ್ನು ಕೇಳುತ್ತೇವೆ, ಅವರು ಕೊಟ್ಟರೆ ಅವುಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಇಡುವ ವ್ಯವಸ್ಥೆ ಮಾಡುತ್ತೇವೆ. ಅಲ್ಲದೇ, ಯಾವುದೇ ಸದಸ್ಯರು ಇ.ಸಿ. ಬಂದಿಲ್ಲವೆಂದು ನಮಗೆ ತಿಳಿಸಿದರೆ ಸಂಬಂದಪಟ್ಟವರಿಂದ ಕೊಡಿಸುವ ವ್ಯವಸ್ಥೆ ಮಾಡುತ್ತೇವೆ.

- ದೀಪಕ್ ವಿಠಲ್ : ಸರ್ವೆ ಮಾಡಿಸಲು ತೆಗೆದುಕೊಂಡಿದ್ದ ಹಣದ ಬಗ್ಗೆ ಸ್ಪಷ್ಟತೆ ಬೇಕು.

- ಮಂಜುನಾಥ್ ಭಟ್ : ಸರ್ವೆಗೆ ರೂ 500/-, 1000/- ತೆಗೆದುಕೊಂಡಿದ್ದರ ಬಗ್ಗೆ.

- ಶ್ರೀನಿವಾಸ್ : ಎರಡು ರಸೀದಿ ಪುಸ್ತಕಗಳು ಬರುವ ಮುಂಚೆಯೆ ಈ ಆಡಿಟ್ ರಿಪೋರ್ಟ್ ಗೆ ಹೇಗೆ ಅನುಮೋದನೆ ಕೊಡುವುದು ?

- ಅರುಣ್ ಮಾರಾಠೆ : ಹಿಂದಿನ ಲೆಕ್ಕಪತ್ರಗಳು, ಸಂಘದ ಹಣದ ದುರ್ಬಳಕೆ ಮತ್ತು ರಸೀದಿ ಪುಸ್ತಕಗಳ ಬಗ್ಗೆ ಹಿಂದಿನ ಸಂಘದ ಪದಾಧಿಕಾರಿಗಳಿಂದ ಸ್ಪಷ್ಟನೆ ಬೇಕು.

- ಅಧ್ಯಕ್ಷರು : ರಸೀದಿ ಪುಸ್ತಕಗಳಿಗೆ ಸಂಬಂದಿಸಿದಂತೆ ಯಾವುದೇ ಸಮಸ್ಯೆ ಉದ್ಭವಿಸಿದಲ್ಲಿ ಮತ್ತು ನಿಮ್ಮೆಲ್ಲರ ಸಲಹೆ-ಸೂಚನೆಗಳ ಆಗತ್ಯತೆ ಕಂಡುಬಂದಲ್ಲಿ ಮುಂದಿನದಿನಗಳಲ್ಲಿ ವಿಶೇಷ ಸರ್ವ ಸದಸ್ಯರ ಸಭೆ ಕರೆಯುತ್ತೇವೆ ಮತ್ತು ನಿಮ್ಮೊಂದಿಗೆ ಚರ್ಚಿಸಿ ಕ್ರಮತೆಗೆದುಕೊಳ್ಳುತ್ತೇವೆ.

- ಖಜಾಂಚಿಗಳಾದ ಸುಹಾಸ್.ಎಸ್.ಕೌಶಿಕ್ ರವರು : ಸಂಘದ ಮುಂದಿನ ವರ್ಷದ ಲೆಕ್ಕ ಪರಿಶೋಧನೆಯನ್ನು ಲೆಕ್ಕಪರಿಶೋಧಕರಾದ ಬಾರ್ಗೇಶಪ್ಪ ಅಂಡ್ ಕಂ. ರವರಿಂದ ಮಾಡಿಸಲು ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರಿದರು.

– ಸದಸ್ಯರು ತಮ್ಮ ಕೈಗಳನ್ನು ಎತ್ತುವ ಮೂಲಕ ಮುಂದಿನ ವರ್ಷದ ಲೆಕ್ಕಪುಸ್ತಕಗಳನ್ನು ಲೆಕ್ಕಪರಿಶೋಧಕರಾದ ಬಾಗೇಶಪ್ಪ ಅಂಡ್ ಕಂ. ರವರಿಂದ ಮಾಡಿಸಲು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದನೆ ನೀಡಿದರು.

7. <u>ಪ್ರಧಾನ ಕಾರ್ಯದರ್ಶಿಗಳಿಂದ 2021–2022 ರ ಅವಧಿಯಲ್ಲಿ ಮಾಡಿದ ಕೆಲಸ–ಕಾರ್ಯಗಳ ವರದಿ</u> :-- ಕಾರ್ಯದರ್ಶಿಗಳು ಕಳೆದ ಸಾಲಿನಲ್ಲಿ ಸಂಘವು ಮಾಡಿದ ಕೆಲಸ–ಕಾರ್ಯಗಳನ್ನು, ವಿಡಿಯೊ ಚಿತ್ರವನ್ನು ಪರದೆಯ ಮೇಲೆ ತೋರಿಸುತ್ತಾ ಸಭೆಗೆ ವಿವರಿಸಿದರು.

– ನಾವು ಕಳೆದ ಸಾಲಿನಲ್ಲಿ 142 ಬೀದಿ ದೀಪಗಳನ್ನು ದುರಸ್ತಿ ಮಾಡಿಸಿರುವೆವು.
– 66 ಹೊಸ ಬೀದಿ ದೀಪಗಳನ್ನು ಅಳವಡಿಸಿರುವೆವು.
– 8 ಹೊಸ ಬೀದಿ ದೀಪದ ಕಂಭಗಳನ್ನು ಹಾಕಿಸಿದ್ದೇವೆ.
– ಬಡಾವಣೆಯ ಎಲ್ಲಾ ಕಂಭಗಳಿಗೆ ಅಳವಡಿಸಿದ್ದ ಹಳೆಯ ವಿಧ್ಯುತ್ ತಂತಿಗಳ ಬದಲಿಗೆ ಹೊಸ ಟ್ವಿಸ್ಟೆಡ್ ಕೇಬಲ್ ಅಳವಡಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

8. <u>ತೆರೆದ ಮನೆ ಚರ್ಚೆ:</u>

– <u>ಸುಬ್ಬಣ್ಣನವರು</u> : ಸಿ.ಸಿ.ಟಿ.ವಿ. ಕ್ಯಾಮರಗಳು ಇನ್ನೂ ಹೆಚ್ಚು ಕಡೆ ಅಳವಡಿಸಲು ಕೇಳಿದರು.
– <u>ಅಧ್ಯಕ್ಷರು</u> : ಹೌದು, 14 ನೇ ಅಡ್ಡರಸ್ತೆಯ 1ನೇ ಎ. ಬಿ ಮತ್ತು ಸಿ ಮುಖ್ಯರಸ್ತೆಗಳಿಗೆ ಮತ್ತು ಸೌಂದರ್ಯ ಬಡಾವಣೆಯ ಮುಂದುವರಿದ ಭಾಗವಾದ ಗುಂಡಪ್ಪ ಬಡಾವಣೆಯ ರಸ್ತೆಗಳಿಗೆ ಸಿ.ಸಿ.ಟಿ.ವಿ. ಕ್ಯಾಮರಾಗಳು ಬೇಕಾಗಿದ್ದು ಮುಂದಿನ ದಿನಗಳಲ್ಲಿ ಅಳವಡಿಸಲಾಗುವುದು.

– <u>ವಸಂತ್ ಕುಮಾರ್</u> : (9ನೇ ಅಡ್ಡರಸ್ತೆ) ಯು.ಜಿ.ಡಿ. ಚೇಂಬರ್ ರಸ್ತೆಯಿಂದ ಕೆಳಗಡೆ ಹೋಗಿದೆ.
– <u>ಕಾರ್ಯದರ್ಶಿಗಳು</u> : ರಿಪೇರಿ ಮಾಡಿಸಲಾಗುವುದು.
– <u>ಅಧ್ಯಕ್ಷರು</u> : ಎಲ್.ಅಂಡ್.ಟಿ. ರವರ ಹತ್ತಿರ ಈ ಸಮಸ್ಯೆ ಬಗ್ಗೆ ಈಗಾಗಲೇ ದೂರು ನೀಡಿದ್ದೇವೆ. ಅವರು ರಸ್ತೆಯಿಂದ ಕೆಳಗೆ ಹೋಗಿರುವ ಚಿಕ್ಕ ಚೆಂಬರ್‌ಗಳ ಲಿಸ್ಟ್ ಕೊಡಿ ಎಂದು ಕೇಳಿದ್ದಾರೆ. ಡಾಂಬರೀಕರಣದ ಕಾರ್ಯ ಮುಗಿದ ನಂತರ ನಾವು ಅವರಿಗೆ ಈ ರೀತಿ ತೊಂದರೆ ಇರುವ ಚೇಂಬರ್‌ಗಳ ಲಿಸ್ಟ್ ಕಳುಹಿಸಿ ಸರಿ ಮಾಡಿಸಲು ಪ್ರಯತ್ನಿಸುತ್ತೇವೆ.

– <u>ಬಸವರಾಜು</u> : 14ನೇ ಅಡ್ಡರಸ್ತೆ, 1ನೇ 'ಏ' 'ಬಿ' ಮತ್ತು 'ಸಿ' ಮುಖ್ಯ ರಸ್ತೆಯ ನೇಮ್ ಪ್ಲೇಟ್ ಗಳು ತಪ್ಪಿವೆ ಸರಿ ಮಾಡಿಸಿ, ಹಾಗೂ ಬಫರ್ ಜೋನ್ ಮತ್ತು ಸರ್ವೆ ನಂ. 23 ರ ಸಮಸ್ಯೆ ಬಗ್ಗೆ ವಿವರಣೆ ನೀಡಬೇಕಾಗಿ ಕೇಳಿದರು.

– <u>ಅಧ್ಯಕ್ಷರು</u> : 1ನೇ 'ಏ' ಮತ್ತು 'ಸಿ' ಮುಖ್ಯ ರಸ್ತೆಗಳ ಡಾಂಬರಿಕರಣ ಕೆಲಸ ಈಗಾಗಲೇ ನಡೆಯುತ್ತಿವೆ, 1ನೇ 'ಬಿ' ಮುಖ್ಯ ರಸ್ತೆಯ ಕೆಲಸವನ್ನು ಸಹ ಸಂಘದ ಒತ್ತಡದ ಮೇರೆಗೆ ಚಿಮಣಿ ಹಿಲ್ಸ್ ನಲ್ಲಿ ಮಾಡಬೇಕಾಗಿದ್ದ ರಸ್ತೆ ಕಾರ್ಯವನ್ನು ನಮ್ಮ ಬಡಾವಣೆಗೆ ವರ್ಗಾಯಿಸಿ ಮಾಡಿಕೊಡಲಾಗುವುದು ಎಂದು ಹೇಳಿದ್ದಾರೆ. ಮುಂದಿನ ಒಂದೆರಡು ವಾರದಲ್ಲಿ ಈ ಕೆಲಸವು ಪ್ರಾರಂಭವಾಗಲಿದೆ, ಅಲ್ಲದೇ ಇದರೊಟ್ಟಿಗೆ ಗುಂಡಪ್ಪ ಬಡಾವಣೆಯ ರಸ್ತೆ ಕಾರ್ಯಗಳನ್ನು ಸಹ ಆದಷ್ಟು ಬೇಗ ಪ್ರಾರಂಬಿಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಮತ್ತು ಶಾಸಕರು ಆಶ್ವಾಸನೆ ನೀಡಿದ್ದಾರೆ. ಹಾಗೆಯೇ ಕೇವಲ 1ನೇ 'ಏ' 'ಬಿ' ಮತ್ತು' 'ಸಿ' ರಸ್ತೆಗಳ ಸೈನ್ ಬೋರ್ಡ್‌ಗಳು ಮಾತ್ರ ತಪ್ಪಾಗಿದೆ ಎಂದರೆ ಸರಿಯಲ್ಲ, ನಮ್ಮ ಬಡಾವಣೆಯ ಹಲವಾರು ಅಡ್ಡರಸ್ತೆಗಳ ಸೈನ್ ಬೋರ್ಡ್‌ಗಳು ಸಹ ತಪ್ಪಾಗಿವೆ. ಬಿಬಿಎಂಪಿ ಯ ಚುನಾವಣೆಯ ನಂತರ ಎಲ್ಲವನ್ನು ಸರಿ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ ಹಾಗೂ ಒಂದೊಮ್ಮೆ ಇದರಿಂದ ಸದಸ್ಯರಿಗೆ ತುಂಬಾ ತೊಂದರೆಯಾಗುತ್ತಿದ್ದರೆ ತಪ್ಪಿರುವ ಸ್ಟಿಕ್ಕರ್ ಗಳನ್ನು ತೆಗೆದು ಹಾಕಲು ಸೂಚಿಸಿದ್ದಾರೆ. ಇನ್ನೂ ಬಫರ್ ಜೋನ್ ಬಗ್ಗೆ, ಏರ್ ಫೋರ್ಸ್‌ನ ಕಾಂಪೌಡ್ ನಿಂದ

ಸಂಖ್ಯೆ.........

100 ಮೀಟರ್ ದೂರದವರೆಗೆ ಬಫರ್ ಜೋನ್ ಬರುತ್ತದೆ ಎಂದಿದ್ದಾರೆ. ಆದ್ದರಿಂದ ಬಿಬಿಎಂಪಿ ಅಧಿಕಾರಿಗಳು ಇಲ್ಲಿ ರಸ್ತೆ ಮಾಡಲು ಸಾದ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಬಫರ್ ಜೋನ್ ನಲ್ಲಿ ಬರುವ ನಿವೇಶನಗಳ ಮತ್ತು ಕಟ್ಟಡಗಳಿಂದ ತೆರಿಗೆ ಹಾಗೂ ಅಭಿವೃದ್ಧಿ ಶುಲ್ಕಗಳನ್ನು ತೆಗೆದುಕೊಂಡು ರಸ್ತೆ ಮಾಡುವುದಿಲ್ಲ ಎಂದರೆ ಹೇಗೆ ಎಂದು ಪ್ರಶ್ನಿಸಲಾಗಿ, ಬಿಬಿಎಂಪಿ ಅಧಿಕಾರಿಗಳು ಏರ್ ಫೋರ್ಸ್ ಕಾಂಪೌಂಡ್ ನಿಂದ 100 ಮೀಟರ್ ವರೆಗೆ ಬಫರ್ ಜೋನ್ ಬರುವುದರಿಂದ ರಸ್ತೆ ಮಾಡಲು ಅನುಮತಿ ಇಲ್ಲ ಎಂದು ಹೇಳಿದರು. ಬಫರ್ ಜೋನ್ ಸಂಬಂದ ಉಚ್ಛ ನ್ಯಾಯಾಲಯದಲ್ಲಿ ಕೇಸ್‌ಗಳು ದಾಖಲಾಗಿವೆ, ಈ ಹಿಂದೆ ಕಟ್ಟಡ ಕಟ್ಟಿದವರಿಗೆ ಇಂಜಂಕ್ಷನ್ ಆದೇಶ ಸಿಕ್ಕಿದೆ, ಚಿಮಿಣಿ ಹಿಲ್ಸ್ ನ ನಿವೇಶನದಾರರಿಂದ ಈ ತರಹದ ಕೇಸ್ ಗಳು ದಾಖಲಾಗಿವೆ. ಈಗ ಬಿಬಿಎಂಪಿ ಅಧಿಕಾರಿಗಳು ನೋಟೀಸ್ ಜಾರಿ ಮಾಡಿ ಇಲ್ಲಿ ಯಾವುದೇ ರೀತಿಯ ಅಬಿವೃದ್ಧಿ ಕಾರ್ಯಗಳನ್ನು ಮಾಡಬಾರದೆಂದು ತಿಳಿಸುತ್ತಿದ್ದಾರೆ.

– <u>ಅದ್ಯಕ್ಷರು</u> : ಸರ್ವೆ ನಂ. 23 ರಲ್ಲಿ ಬರುವ ನಿವೇಶನಗಳಿಗೂ ಸಹ ತಿದ್ದುಪಡಿ ಪತ್ರ ಆಗಬೇಕಾಗಿದೆ. ನಿಮ್ಮೆಲ್ಲರ ಸಹಕಾರದೊಂದಿಗೆ ಭೂ–ಮಾಲೀಕರೊಂದಿಗೆ ಮಾತನಾಡಿ ಈ ಸಂಬಂದ ಸಂಘವು ನಿವೇಶನದಾರರಿಗೆ ಸಹಾಯ ಮಾಡಲಿದೆ.

– <u>ಮಂಜುನಾಥ್</u> : (2ನೇ ಮುಖ್ಯ ರಸ್ತೆ 2ನೇ ಅಡ್ಡರಸ್ತೆ) 1ನೇ ಮುಖ್ಯ ರಸ್ತೆಯಲ್ಲಿನ ಚರಂಡಿಗಳಿಗೆ ಸಿಮೆಂಟ್ ಹಾಕಿದ್ದಾರೆ ನಮ್ಮ ರಸ್ತೆಗೆ ಹಾಕಿಲ್ಲ.

– <u>ಕಾರ್ಯದರ್ಶಿಗಳು</u> : ಈ ವಿಷಯ ಬಿಬಿಎಂಪಿ ಯವರೊಂದಿಗೆ ಚರ್ಚೆ ಮಾಡುತ್ತೇವೆ, 2ನೇ ಮುಖ್ಯ ರಸ್ತೆಯಲ್ಲಿನ ಯು.ಜಿ.ಡಿ. ಚೆಂಬರ್‌ಗೆ ಚಿಮಣಿ ಹಿಲ್ಸ್ ಬಡಾವಣೆಯಲ್ಲಿನ ಯು.ಜಿ.ಡಿ. ಪೈಪ್ ಗಳನ್ನು ಕನೆಕ್ಟ್ ಮಾಡಲು ಬಂದಿದ್ದರು, ಆದರೆ ಸಂಘವು ಚಿಮಣಿ ಹಿಲ್ಸ್ ಬಡಾವಣೆಯ ಯು.ಜಿ.ಡಿ ಸಂಪರ್ಕವನ್ನು ಸೈಂಟಿಫಿಕ್ ರೀತಿ ಕನೆಕ್ಟ್ ಮಾಡಬೇಕೆಂದು ಸ್ಥಳಕ್ಕೆ ಎಲ್.ಅಂಡ್.ಟಿ ಮತ್ತು ಬಿ.ಬಿ.ಎಂ.ಪಿ. ಇಂಜಿನಿಯರ್‌ಗಳನ್ನು ಕರೆಸಿ ಹೇಳಿದ್ದೇವೆ. ಶಾಸಕರು ನಮ್ಮ ಸದಸ್ಯರಿಗೆ ಯಾವುದೇ ತೊಂದರೆ ಯಾಗದಂತೆ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದಾರೆ.

– <u>ದೀಪಕ್ ವಿಠ್ಠಲ್</u> : ರಸ್ತೆ ಕಸ ಗುಡಿಸುವವರು ಬರುತ್ತಿಲ್ಲ, ಕೊನೆ ಪಕ್ಷ 15 ದಿನಕ್ಕೊಮ್ಮೆಯಾದರೂ ಬರಬೇಕು.

– <u>ಅದ್ಯಕ್ಷರು</u> : ಅವರಿಗೆ ಮುಖ್ಯ ರಸ್ತೆಗಳನ್ನು ಮಾತ್ರ ಗುಡಿಸಲು ಕಂಟ್ರಾಕ್ಟರ್‌ಗಳು ಹೇಳಿದ್ದಾರಂತೆ, ಮುಂದಿನ ದಿನಗಳಲ್ಲಿ ಎಲ್ಲಾ ರಸ್ತೆಗಳಲ್ಲೂ ಕಸ ಗುಡಿಸುವಂತೆ ಒತ್ತಡ ಹಾಕಲಾಗುವುದು.

– <u>ಶ್ರೀನಿವಾಸ ರಾವ್</u> : (3ನೇ ಮುಖ್ಯ ರಸ್ತೆ) 3 ನೇ ಕ್ರಾಸಿನ ಕಲ್ವರ್ಟ್ ಬಂದ್ ಮಾಡಿದ್ದಾರೆ ರಿಪೇರಿ ಮಾಡಿಸಿ. ಅಲ್ಲದೆ ಚುನಾವಣೆ ಹತ್ತಿರ ಬರುತ್ತಿದೆ. ವೋಟರ್ ಐ.ಡಿ ಮಾಡಿಕೊಡುವ ಕ್ಯಾಂಪ್ ಮಾಡಿಸಿ.

– <u>ಕಾರ್ಯದರ್ಶಿಗಳು</u> : ಬಂದ್ ಆಗಿರುವ ಕಲ್ವರ್ಟ್ ನ್ನು ಸರಿ ಮಾಡಿಸಲಾಗುವುದು ಹಾಗೆ ಸಾದ್ಯವಾದರೆ ವೋಟರ್ ಐ.ಡಿ. ಕ್ಯಾಂಪ್ ಮಾಡಿಸಲು ಪ್ರಯತ್ನಿಸಲಾಗುವುದು.

– <u>ದೀಪಕ್ ವಿಠ್ಠಲ್</u> : ಸೌಂದರ್ಯಗಿರಿ ಉದ್ಯಾನವನ ಎಲ್ಲಿಯವರೆಗೆ ಬಂತು? ಜೆಸಿಬಿ ಬಂದಿತ್ತು ಏನಾಯಿತು?

– <u>ಕಾರ್ಯದರ್ಶಿಗಳು</u> : ಏರ್‌ಫೋರ್ಸ್‌ನ ಬಫರ್ ಜೋನ್ ಸಮಸ್ಯೆಯಿಂದ ಸೌಂದರ್ಯಗಿರಿ ಯೋಜನೆ ಸದ್ಯಕ್ಕೆ ಇರುವುದಿಲ್ಲ.

– <u>ಮಂಗಳ ವರ್ಝು</u> : ಕಾವೇರಿ ನೀರಿನ ಸಮರ್ಪಕ ಹಂಚಿಕೆಗೆ ಸಮಯ ಮತ್ತು ದಿನ ನಿಗದಿಪಡಿಸಿ.

– <u>ಕಾರ್ಯದರ್ಶಿಗಳು</u> : ಈಗಾಗಲೇ ವಾರಕ್ಕೆ ಒಂದು ದಿನ ನಿರ್ಧಾರ ಆಗಿದೆ, ಇನ್ನೊಂದು ದಿನ ನೀರು ಬಿಡಿಸುವ ಪ್ರಯತ್ನ ಮಾಡಲಾಗುವುದು. ನಮಗೆ ಈಗ ಟ್ರಯಲ್ ಬೇಸಿಸ್ ನಲ್ಲಿ ನೀರು ಬಿಡುತ್ತಿದ್ದಾರೆ, 2023ರಿಂದ ಇದು ರೆಗ್ಯುಲರೈಸ್ ಆಗುತ್ತೆ.

– <u>ಅದ್ಯಕ್ಷರು</u> : ಸದ್ಯದ ಪರಿಸ್ಥಿತಿಯಲ್ಲಿ ನೀರು ಯಾವ ಸಮಯದಲ್ಲಿ ಬಿಡುತ್ತಾರೆಂದು ಗ್ಯಾರಂಟಿ ಇಲ್ಲ. ದಯಮಾಡಿ ಸದಸ್ಯರು ನೀರು ಪೋಲಾಗದಂತೆ ತಮ್ಮ ನೀರಿನ ಸಂಪುಗಳಿಗೆ ಅಗತ್ಯ ಫುಟ್‌ಬಾಲ್ ಗಳನ್ನು ಜೋಡಿಸಿಕೊಂಡು ನೀರು ವ್ಯರ್ಥವಾಗದಂತೆ ನೋಡಿಕೊಳ್ಳಿ.

– <u>ನರಸಿಂಹ</u> : (14ನೇ ಅಡ್ಡರಸ್ತೆ, 1ನೇ ಮುಖ್ಯ ರಸ್ತೆ) ಕಾಲೇಜಿನವರು ಮಳೆ ನೀರು ಹರಿದು ಹೋಗಲು ನಮ್ಮ ರಸ್ತೆಯಲ್ಲಿ ಪೈಪು ಹಾಕಿದ್ದಾರೆ ಇದರಿಂದ ನಮ್ಮ ರಸ್ತೆಯಲ್ಲಿ ಸಮಸ್ಯೆಯಾಗಿದೆ. ಕಾರಣ ಸರಿಯಾದ ಚರಂಡಿ ಇಲ್ಲ, ಇರುವ ಚರಂಡಿ ಸಾಕಾಗುವುದಿಲ್ಲ.
– ಕಾರ್ಯದರ್ಶಿಗಳು : ಕಾಲೇಜಿನಿಂದ ಬರುವ ನೀರಿಗೆ ಬಿ.ಬಿ.ಎಂ.ಪಿ. ಅಧಿಕಾರಿಗಳ ಬಳಿ ಮಾತನಾಡುತ್ತೇವೆ.

– <u>ಹೇಮಪ್ರಕಾಶ್</u> : ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕ್ರೀಡಾ ಸ್ಪರ್ಧೆಗಳ ಬಗ್ಗೆ ಸ್ವಲ್ಪ ಮಾತನಾಡುವುದಿತ್ತು ಮತ್ತು ನಮಗೆ ಬಸವರಾಜ್ ಸರ್ ಮೇಲೆ ತುಂಬಾ ಗೌರವ ಇತ್ತು. ಸಂಗೀತ ಸ್ಪರ್ಧೆಗಳಿಗೆ ಕನಿಷ್ಠ 5 ಸ್ಪರ್ಧಿಗಳಿದ್ದರೆ ಸ್ಪರ್ಧೆ ನಡೆಸಲಾಗುವುದು ಎಂದಿದ್ದೀರಿ, ಇಬ್ಬರೆ ಸ್ಪರ್ಧಿಗಳಿದ್ದರೆ ಏಕೆ ಅವಕಾಶ ಇಲ್ಲ? ನವೆಂಬರ್ ನಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದ ಬಗ್ಗೆ ನಮಗೆ ಮಾಹಿತಿಯೇ ಇರಲಿಲ್ಲ, ಏಕೆ ? ಎಲ್ಲರಿಗೂ ಅವಕಾಶ ಕೊಡಿ.
– <u>ಅದ್ಯಕ್ಷರು</u> : ನವೆಂಬರ್ 1 ರ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ನಮಗೆ ಕೇವಲ ಒಂದು ವಾರದ ಕಾಲಾವಕಾಶ ಮಾತ್ರ ಇತ್ತು ಮತ್ತು ವೆಂಕಟೇಶ್ ಪ್ರಸಾದ್ ಭಟ್ ರವರು ಈ ಕಾರ್ಯಕ್ರಮಕ್ಕೆ ತಯಾರಾಗಲು ಎಲ್ಲರಿಗೂ ನಿಮ್ಮ ಮಗಳನ್ನೂ ಒಳಗೊಂಡಂತೆ ಫೋನ್ ಮಾಡಿ ತಿಳಿಸಲು ಪ್ರಯತ್ನಿಸಿದ್ದರಂತೆ.
– <u>ಹೇಮಪ್ರಾಕಾಶ್</u> : ಇಲ್ಲ, ಫೋನ್ ಮಾಡಿಲ್ಲ.
– <u>ಅದ್ಯಕ್ಷರು</u> : ವೆಂಕಟೇಶ್ ಭಟ್ಟರು ಶಿವರಾಜ್ ಮಗಳಿಗೆ, ಪಡಿಕೆ ಮಕ್ಕಳಿಗೆ, ಅನುಷಾರವರಿಗೆ ಹಾಗೆಯೇ ಸಂಘದ ಕಾರ್ಯಕ್ರಮದಲ್ಲಿ ಈ ಹಿಂದೆ ಬಾಗವಹಿಸಿದ್ದ ಎಲ್ಲರಿಗೂ ಫೋನ್ ಮಾಡಿದ್ದೇನೆ ಎಂದು ತಿಳಿಸಿದ್ದಾರೆ, ಒಂದೊಮ್ಮೆ ನಿಮಗೆ ಫೋನ್ ಬಂದಿಲ್ಲದಿದ್ದಲ್ಲಿ ಕ್ಷಮೆ ಇರಲಿ. ಮುಂದಿನ ದಿನಗಳಲ್ಲಿ ಎಲ್ಲರಿಗೂ ತಿಳಿಸುತ್ತೇವೆ ದಯಮಾಡಿ ಬಾಗವಹಿಸಿ. ಅಲ್ಲದೇ, ನವೆಂಬರ್ 1 ರ ಕಾರ್ಯಕ್ರಮದಲ್ಲಿ ಹಾಡು ಹೇಳಲು ಪ್ರಕಾಶ್ ರವರಿಗೆ ಅವಕಾಶ ಮಾಡಿ ಕೊಟ್ಟಿದ್ದಾರೆ.
– ಇನ್ನು ಸಂಗೀತ ಸ್ಪರ್ಧೆಗಳಲ್ಲಿ ಬಾಗವಹಿಸುವ ಪ್ರತಿ ವಿಭಾಗದಲ್ಲೂ 5 ಮತ್ತು ಅದಕ್ಕಿಂತ ಹೆಚ್ಚು ಸ್ಪರ್ಧಿಗಳಿದ್ದರೆ ಮಾತ್ರ ಆ ಸ್ಪರ್ಧೆ ನಡೆಸಲು ಅವಕಾಶ ಕೊಡಲಾಗುವುದು ಎಂದು ಸಂಘದ ಆಡಳಿತ ಮಂಡಳಿ ನಿರ್ಧಾರ ಮಾಡಿರುತ್ತಾದೆ, ಇದು ಯಾವುದೇ ವ್ಯಕ್ತಿಯ ಏಕಪಕ್ಷೀಯ ನಿರ್ಧಾರವಲ್ಲ. ಅಲ್ಲದೇ, ಸ್ಪರ್ಧೆ ಎಂದರೆ ಕನಿಷ್ಠ ಸ್ಪರ್ಧಿಗಳಿದ್ದರೆ ಮಾತ್ರ ಅದನ್ನು ಸ್ಪರ್ಧೆಗೂ ಮತ್ತು ಸ್ಪರ್ಧಿಗಳಿಗೂ ಗೌರವ, ಇಬ್ಬರೇ ಸ್ಪರ್ಧಿಗಳು ಬಾಗವಹಿಸಿದರೆ ಅದು ಸ್ಪರ್ಧೆ ಎಂದೆನಿಸಿಕೊಳ್ಳುವುದಿಲ್ಲ. ಆದ್ದರಿಂದ ಇಬ್ಬರೇ ಸ್ಪರ್ಧಿಗಳಿದ್ದ ಸ್ಪರ್ಧೆಗಳಿಗೆ ಅವಕಾಶ ಇರಲಿಲ್ಲ.
– <u>ಪ್ರಕಾಶ್</u> : ನಮಗೆ ಈ ಬಗ್ಗೆ ಮಾಹಿತಿ ಇರಲಿಲ್ಲ.
– <u>ಅದ್ಯಕ್ಷರು</u> : ಸಂಘವು ಪ್ರತಿಯೊಂದು ವಿಭಾಗದಲ್ಲಿ ಕನಿಷ್ಟ 5 ಸ್ಪರ್ಧಿಗಳು ಬಾಗವಹಿಸಲೇ ಬೇಕು ಎಂದು ಪ್ರಚಾರ ಪಡಿಸಿದ್ದರೆ ಯಾರೂ ಮುಂದೆ ಬರುತ್ತಿರಲಿಲ್ಲ ಆದ್ದರಿಂದ ಪ್ರಚಾರ ಮಾಡಿರಲಿಲ್ಲ.
– <u>ಪ್ರಕಾಶ್</u> : ನವೆಂಬರ್ 1ರ ಕಾರ್ಯಕ್ರಮದಲ್ಲಿ ನನಗೆ ಹಾಡಲು ಮಧ್ಯದಲ್ಲಿ ಅವಕಾಶ ಕೊಡಿ ಎಂದು ಕೇಳಿದ್ದೆ ಆದರೆ ಕೊನೆಯಲ್ಲಿ ಹಾಡಿಸಿದರು.
– <u>ಅದ್ಯಕ್ಷರು</u> : ನವೆಂಬರ್ 1 ರ ಕಾರ್ಯಕ್ರಮವನ್ನು ಸೀಕ್ವೆನ್ಸ್ ಪ್ರಕಾರ ನಡೆಸಲು ನಿರ್ಧಾರ ಮಾಡಿದ್ದರಿಂದ ಅದನ್ನು ಕೊನೆಕ್ಷಣದಲ್ಲಿ ಬದಲಾಯಿಸಲು ಆಗುವುದಿಲ್ಲ. ಸಂಗೀತ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿಯೂ ಕೂಡ 5 ಸ್ಪರ್ಧಿಗಳಿದ್ದರೆ ಮಾತ್ರ ಸ್ಪರ್ಧೆಗೆ ಅವಕಾಶ ನೀಡಲಾಗುವುದು ಇಲ್ಲದಿದ್ದರೆ ಇಲ್ಲ, ಕಾರಣ ಅದು ಸ್ಪರ್ಧೆ. ಆದರೂ ಒಂದೊಮ್ಮೆ ಯಾವುದೇ ವಿಭಾಗದಲ್ಲಿ ಕಡಿಮೆ ಸ್ಪರ್ಧಿಗಳಿದ್ದಲ್ಲಿ ಆ ವಯೋಮಾನದ ವಿಭಾಗವನ್ನು ಇನ್ನೊಂದು ವಯೋಮಾನದ ಹಾಡುಗಾರರೊಂದಿಗೆ ಸೇರಿಸಿ ಸ್ಪರ್ಧೆಯಲ್ಲಿ ಭಾಗವಹಿಸಲು ಎಲ್ಲಾ ಸ್ಪರ್ಧಿಗಳಿಗೆ ಅವಕಾಶ ನೀಡಿದ್ದೇವೆ, ಯಾರಿಗೂ ಅವಕಾಶಗಳನ್ನು ನಿರಾಕರಿಸಿಲ್ಲ, ಮತ್ತು ಈ

ರೀತಿ 2 ವಯೋ ವರ್ಗದ ಸ್ಪರ್ಧೆಗಳನ್ನು ಸಂಯೋಜನೆ ಮಾಡಿದಾಗ ಹೆಚ್ಚುವರಿಯಾಗಿ ಸಮಾದಾನಕರ ಬಹುಮಾನವನ್ನು ಘೋಷಿಸಿದ್ದೇವೆ.

– ಆಶಾ ಯುವರಾಜ್ : ನವೆಂಬರ್ 1 ರ ಕಾರ್ಯಕ್ರಮದಲ್ಲಿ ಟ್ರ್ಯಾಕ್ ನಲ್ಲಿ ಹಾಡಬೇಕೋ ಅಥವಾ ಟ್ರ್ಯಾಕ್ ಇಲ್ಲದೆ ಹಾಡಬೇಕೋ ಗೊತ್ತಿರಲಿಲ್ಲ, ಮುಂದೆ ಅವಕಾಶ ಕೊಡಿ. ಕೆಲವರಿಗೆ ಬೇಸರವಾಗಿದೆ ಟ್ರ್ಯಾಕ್ ಇದ್ದರೆ ಮೊದಲೇ ಹೇಳಿ, ಗಣರಾಜ್ಯೋತ್ಸವ ಕಾರ್ಯಕ್ರಮ ಜೂನ್ ನಲ್ಲಿಯೂ ಮಾಡಲಾಗಲಿಲ್ಲ. ಮುಂದಿನ ಜನವರಿ 26 ರಂದು ಮಾಡಿ.

– ಅದ್ಯಕ್ಷರು : ಕಳೆದ ವರ್ಷ ಕರೋನ ಸಾಂಕ್ರಾಮಿಕ ರೋಗದ ಕಾರಣ ಗಣರಾಜ್ಯೋತ್ಸವ ಕಾರ್ಯಕ್ರಮ ಮಾಡಿಲ್ಲ ಮುಂದಿನ ದಿನಗಳಲ್ಲಿ ಆಚರಿಸಲಾಗುವುದು. ಅಲ್ಲದೇ, ನಮ್ಮ ಈ ಹಿಂದಿನ ಎಲ್ಲಾ ಸಂಗೀತ ರಸಸಂಜೆ ಕಾರ್ಯಕ್ರಮಗಳಲ್ಲಿಯೂ ಟ್ರ್ಯಾಕ್ ನ್ನು ಉಪಯೋಗಿಸಿದ್ದೇವೆ, ಏಕೆಂದರೆ ಲೈವ್ ಮ್ಯೂಜಿಕ್‌ಗೆ ನಮ್ಮ ಬಜೆಟ್ ಸಾಕಾಗುವುದಿಲ್ಲ. ಮುಂದಿನ ದಿನಗಳಲ್ಲಿ ಯಾರಾದರೂ ಪ್ರಾಯೋಜಕತ್ವ ಕೊಟ್ಟರೆ ಲೈವ್ ಮ್ಯೂಜಿಕ್ ಮಾಡಿಸಬಹುದು. ಸಪ್ತಸ್ವರ ತಂಡದಲ್ಲಿ ಸ್ಕ್ರೀನಿಂಗ್ ಕಮಿಟಿ ಇರುತ್ತದೆ, ಅಲ್ಲಿ ತೀರ್ಪುಗಾರರನ್ನು ನೇಮಿಸಿ ಹಾಡುಗಾರರ ಗುಣಮಟ್ಟವನ್ನು ನಿರ್ಧರಿಸುತ್ತಾರೆ. ಮುಂದಿನ ದಿನಗಳಲ್ಲಿ ಯಾವುದೇ ಕಾರ್ಯಕ್ರಮ ಇದ್ದಾಗ ಹಾಡಲಿಚ್ಚಿಸುವವರೆಲ್ಲರೂ ಹೆಸರು ನೊಂದಾಯಿಸಿಕೊಳ್ಳಬಹುದು.

– ಆಶಾ ಯುವರಾಜ್ : ಸೌಂದರ್ಯ ಕಾಲೇಜ್ ನವರ ಬಳಿ ಮಾತನಾಡಿ ಸ್ಕೂಲ್ ಬಸ್ಸುಗಳಿಗೆ ಓಡಾಡಲು ಒನ್–ವೇ ವ್ಯವಸ್ಥೆ ಮಾಡಿ.

– ಕಾರ್ಯದರ್ಶಿಗಳು : ಈ ಬಗ್ಗೆ ಕಾಲೇಜ್ ಆಡಳಿತ ಮಂಡಳಿಯವರೊಂದಿಗೆ ಚರ್ಚಿಸಲಾಗುವುದು. ಹಾಗೆಯೇ, ನಮ್ಮ ಬಡಾವಣೆಯಲ್ಲಿ ಟ್ರಾಫಿಕ್ ನ ಸಮಸ್ಯೆ ತುಂಬಾ ಹೆಚ್ಚಾಗಿದೆ ಆದ್ದರಿಂದ ರಸ್ತೆ ಉಬ್ಬುಗಳ ಅಳವಡಿಕೆ ಬಗ್ಗೆ ಪೀಣ್ಯ ಸಂಚಾರಿ ಪೋಲೀಸರಿಗೆ ಮನವಿ ಪತ್ರಗಳನ್ನು ಕೊಡುತ್ತೇವೆ.

– ರವಿರಾಜ್ : (14ನೇ ಅಡ್ಡರಸ್ತೆ, 1ನೇ 'ಸಿ' ಮುಖ್ಯ ರಸ್ತೆ) 1ನೇ ಮುಖ್ಯರಸ್ತೆಯನ್ನು ಪುನಃ ಅಗೆಯುತ್ತಿದ್ದಾರೆ, ತೊಂದರೆಯಾಗಿದೆ, ಮೊನ್ನೆ ಮಾಡಿದ ರಸ್ತೆ ಡ್ಯಾಮೇಜ್ ಆಗಿದೆ.

– ಅದ್ಯಕ್ಷರು : 1ನೇ ಮತ್ತು 2ನೇ ಮುಖ್ಯ ರಸ್ತೆಯಲ್ಲಿರುವ ಕೊಳವೆ ಬಾವಿಗಳಿಗೆ ಚೇಂಬರ್ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಬಿ.ಬಿ.ಎಂ.ಪಿ ಯವರಿಗೆ ಅನುದಾನ ಸದ್ಯ ಬಂದಿರುವುದರಿಂದ ಕೆಲಸ ಈಗ ಮಾಡುತ್ತಿದ್ದಾರೆ, ಆದರಿಂದಾಗಿ ನಿವಾಸಿಗಳಿಗೆ ತೊಂದರೆಯಾಗುತ್ತಿದೆ.

– ಶ್ರೀಕಾಂತ್ ಭಟ್ : (1ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆ): ರಾಜಕಾಲುವೆ ಬಗ್ಗೆ ಯವಾಗ ನೆಮ್ಮದಿ ಕೊಡುತ್ತೀರಾ?

– ಕಾರ್ಯದರ್ಶಿಗಳು : ರಾಜಕಾಲುವೆ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಇಲ್ಲ.

– ಬಸವರಾಜ್ : 10 ಚಕ್ರದ ಲಾರಿಗಳು ಓಡಾಡುವುದರಿಂದ ನೀರಿನ ಪೈಪ್ ಗಳು ಒಡೆದು ಹೋಗುತ್ತಿವೆ, ಯಾರೂ ರಿಪೇರಿ ಮಾಡುವುದಿಲ್ಲ ಮತ್ತು ಸ್ಕೂಲ್ ನಿಂದ ಸೌಂಡ್ ಜಾಸ್ತಿ ಬರುತ್ತಿದೆ.

– ಕಾರ್ಯದರ್ಶಿಗಳು : ರಾತ್ರಿ 10 ಗಂಟೆ ನಂತರ ಸೌಂಡ್ ಬಂದರೆ ಶಾಲೆ ಆಡಳಿತ ಮಂಡಳಿಯೊಂದಿಗೆ ಮಾತನಾಡುತ್ತೇವೆ.

– ಅದ್ಯಕ್ಷರು : ಮೊನ್ನೆಯ ದಿನ ಕಾಲೇಜಿನಲ್ಲಿ ಕಾರ್ಯಕ್ರಮ ನಿಮಿತ್ತ ಲೌಡ್ ಸ್ಪೀಕರ್ ಹಾಕಿರುವುದಾಗಿ ಹೇಳಿದ್ದರು, ಕಾನೂನಿನ ಇತಿಮಿತಿಯಲ್ಲಿ ಸ್ಪೀಕರ್ ಉಪಯೋಗಿಸಲು ಕಾಲೇಜಿನವರ ಬಳಿ ಮಾತನಾಡಿ ಈ ಬಗ್ಗೆ ತಿಳಿಸುತ್ತೇವೆ. ಹಾಗೆಯೇ, ನಿಮ್ಮ ರಸ್ತೆಯಲ್ಲಿ ಡಾಂಬರೀಕರಣ ಆಗುವವರೆಗೂ ಯಾವುದೇ ಲಾರಿ ಓಡಾಡಿದಾಗ ಪೈಪ್ ಒಡೆದು ಹೋಗುವ ಸಾದ್ಯತೆಗಳಿರುತ್ತದೆ, ಆ ರೀತಿ ತೊಂದರೆಯಾದಲ್ಲಿ ಅದನ್ನು ಸಂಬಂದ ಪಟ್ಟವರಿಂದ ರಿಪೇರಿ ಮಾಡಿಸಲಾಗುವುದು.

– <u>ನಾಗಭೂಷಣ್</u> : 1ನೇ ಮುಖ್ಯ ರಸ್ತೆಯ ಚರಂಡಿ ಸಮಸ್ಯೆ ತುಂಬಾ ಇದೆ.
– <u>ಅಧ್ಯಕ್ಷರು</u> : 1ನೇ ಮತ್ತು 2 ನೇ ಮುಖ್ಯ ರಸ್ತೆಯ ಎರಡೂ ಬದಿಗಳಲ್ಲಿ ವ್ಯವಸ್ಥಿತ ಚರಂಡಿ ಯಾದರೆ ಸಮಸ್ಯೆ ಪರಿಹಾರವಾಗುವುದು.

– <u>ರವಿ ಕುಮಾರ್</u> : ಬೀದಿನಾಯಿ ಸಮಸ್ಯೆ ಬಗ್ಗೆ ಯಾರೂ ಮಾತನಾಡಲೇ ಇಲ್ಲ.
– <u>ಕಾರ್ಯದರ್ಶಿಗಳು</u> : ನಮ್ಮ ಬಡಾವಣೆಗೆ ಪ್ರತಿ ಗುರುವಾರ ನಾಯಿ ಹಿಡಿಯುವರು ಬರುತ್ತಾರೆ, ಆದರೆ ನಾಯಿಗಳು ಸಿಗುವುದಿಲ್ಲ, ನಮ್ಮ ಕಮಿಟಿಯಲ್ಲಿಯೇ ಈ ಬಗ್ಗೆ ಬಂದು ಕಂಪ್ಲೇಂಟ್ ಮಾಡಿದ್ದರು, 1ನೇ 'ಬಿ' ಮುಖ್ಯ ರಸ್ತೆಯ ಕಪ್ಪು ನಾಯಿ ಬಗ್ಗೆ, ನಾವು ಅದನ್ನು ಅಟೆಂಡ್ ಮಾಡಿದ್ದೇವೆ, ಆ ನಾಯಿಯನ್ನು ಸಂಬಂಧ ಪಟ್ಟವರು ತಮ್ಮ ಊರಿಗೆ ತೆಗೆದುಕೊಂಡು ಹೋಗಿದ್ದಾರೆ.
– <u>ಮಂಜುನಾಥ್</u> : (2ನೇ ಮುಖ್ಯರಸ್ತೆ) ನಾಯಿಗಳಿಂದ ಗಲೀಜು ಮಾಡಿಸುತ್ತಾರೆ.
– <u>ಕಾರ್ಯದರ್ಶಿಗಳು</u> : ನಾಯಿ ಮಾಲಿಕರು ನಾಯಿಯೊಂದಿಗೆ ಅಗತ್ಯ ಕವರ್ ತೆಗೆದುಕೊಂಡು ಹೋಗಬೇಕು ಅಥವಾ ಖಾಲಿ ನಿವೇಶನಗಳಿಗೆ ಕರೆದುಕೊಂಡು ಹೋಗಬೇಕಾಗುತ್ತದೆ.

– <u>ರೂಪ</u> : (7ನೇ ಅಡ್ಡರಸ್ತೆ 1ನೇ ಮುಖ್ಯ ರಸ್ತೆ) ನಮ್ಮ ಮನೆ ತುಂಬಾ ಕೆಳಗಡೆ ಇದೆ ಮನೆಯ ಒಳಗಡೆ ನೀರು ಬರುತ್ತದೆ.
– <u>ಕಾರ್ಯದರ್ಶಿಗಳು</u> : ಡ್ರೈನೇಜನ್ನು ತುಂಬಾ ಕ್ಲೀನಾಗಿ ಇಟ್ಟುಕೊಳ್ಳಿ, ವಸಂತ್ ಕುಮಾರ್ ಸರ್ ಮನೆಯ ಮುಂದೆ ಹಾಕಿದಂತೆ ಚರಂಡಿ ಮೇಲಿನ ಕಲ್ಲು ತೆಗೆದು ಕಂಬಿಗಳಿಂದ ಚರಂಡಿ ಮುಚ್ಚುವ ವ್ಯವಸ್ಥೆ ಮಾಡಿಕೊಳ್ಳಿ.

– <u>ಹರ್ಷ</u> : (9ನೇ ಅಡ್ಡರಸ್ತೆ 2ನೇ ಮುಖ್ಯ ರಸ್ತೆ) ಚೇಂಬರ್ ಪ್ರಾಬ್ಲಮ್ ಆಗಿದೆ, ಹೊಸದಾಗಿ ಎಸ್.ಡಬ್ಲ್ಯೂ.ಎ. ಗೆ ಸದಸ್ಯರಾಗಿ ಸೇರುವುದು ಹೇಗೆ ? ನೋಟೀಸ್ ಬೋರ್ಡ್ ಏನಾದರೂ ಇದೆಯೆ?
– <u>ಕಾರ್ಯದರ್ಶಿಗಳು</u> : ನೋಟೀಸ್ ಬೋರ್ಡ್ ಇದೆ, ಮುಂದಿನ ದಿನಗಳಲ್ಲಿ ಸರಿ ಮಾಡಿಸಲಾಗುವುದು. ಮುಂದಿನ ದಿನಗಳಲ್ಲಿ ಅಡ್ಡರಸ್ತೆಗಳ ಸೈನ್ ಬೋರ್ಡ್‌ನಲ್ಲಿ ಎಸ್.ಡಬ್ಲ್ಯೂ.ಎ. ನ ಕಾಂಟಾಕ್ಟ್ ಫೋನ್ ನಂಬರ್ ಸೇರಿಸಲಾಗುವುದು.

– <u>ಉಡುಪ</u> : ನಮ್ಮ ಮನೆ ಎದುರು ವಿದ್ಯುತ್ ಕಂಬಕ್ಕಾಗಿ ಅಗೆದು ನೀರಿನ ಪೈಪ್ ಡ್ಯಾಮೇಜ್ ಆಗಿದೆ.
– <u>ಕಾರ್ಯದರ್ಶಿಗಳು</u> : ರಿಪೇರಿ ಮಾಡಿಸಲಾಗುವುದು.

– <u>ದೊಡ್ಡಹನುಮಯ್ಯ</u> :(1ನೇ 'ಬಿ' ಮುಖ್ಯ ರಸ್ತೆ) ಬೆಸ್ಕಾಂ ನ ಕೇಬಲ್‌ಗಳು ಜೋತು ಬಿದ್ದಿವೆ.
– <u>ಪರೇಶ್ ರವರು</u> : ಜೋತು ಬಿದ್ದಿರುವ ಬೆಸ್ಕಾಂ ಕೇಬಲ್ ಗಳನ್ನು ರಿಪೇರಿ ಮಾಡುವ ಮೊದಲ ಹಂತದ ಕಾರ್ಯ ಮುಗಿದಿದೆ, ಉಳಿದಿರುವುದನ್ನು 2ನೇ ಹಂತದಲ್ಲಿ ಸರಿ ಮಾಡುತ್ತಾರೆ. 10ನೇ ಕ್ರಾಸ್ ಗೆ ವಿದ್ಯುತ್ ಕಂಬ ಹಾಕಲಾಗುವುದು, ನಮ್ಮ ಬಡಾವಣೆಯಲ್ಲಿ ಒಟ್ಟು 8 ರಿಂದ 10 ಹೆಚ್ಚುವರಿ ವಿದ್ಯುತ್ ಕಂಬಗಳನ್ನು ಹಾಕಲಾಗುವುದು.

– <u>ವಿವೇಕ್ ಶ್ಯಾನುಬೋಗ್</u> : ವನ ಮಹೋತ್ಸವ ಸಮಯದಲ್ಲಿ ಗಿಡಗಳನ್ನು ನೀಡಿ.

– <u>ಅಶೋಕ್ ಕುಮಾರ್</u> :(2ನೇ ಮುಖ್ಯ ರಸ್ತೆ) ನಮ್ಮ ರಸ್ತೆಗೆ ವಿದ್ಯುತ್ ಕಂಬ ಹಾಕಿಸಲು ತುಂಬಾ ವರ್ಷಗಳಿಂದ ಕೇಳುತ್ತಿದ್ದೇವೆ, ಲೈಟ್ ಕೇಳಿದರೆ ಲೈಟ್ ಕೊಡುತ್ತೇವೆ ನಿಮ್ಮ ಮನೆಗೆ ಕನೆಕ್ಟ್ ಮಾಡಿಸಿಕೊಳ್ಳಿ ಎನ್ನುತ್ತೀರಿ, 2ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆಯಲ್ಲಿ ಕಸ ಹಾಕುತ್ತಾರೆ.

ಸಂಖ್ಯೆ........
ದಿನಾಂಕ........

– ಅಧ್ಯಕ್ಷರು : ಈಗಾಗಲೇ 10 ಹೆಚ್ಚುವರಿ ವಿದ್ಯುತ್ ಕಂಬಗಳನ್ನು ಹಾಕಿಸಿದ್ದೇವೆ. ಕೆಲವು ರಸ್ತೆ ಕಂಬದಿಂದ ಕಂಬಕ್ಕೆ ಅಂತರ ಹಾಸ್ತಿ ಇದ್ದಲ್ಲಿ, ಬೆಸ್ಕಾಂ ನವರು ಟ್ವಿಸ್ಟೆಡ್ ಕೇಬಲ್ ಹಾಕಿದ ನಂತರ ಹೆಚ್ಚುವರಿ ವಿದ್ಯುತ್ ಕಂಬಗಳನ್ನು ಹಾಕಲು ತಿಳಿಸಲಾಗುವುದು. ನಮಗೆ 4–5 ವಿದ್ಯುತ್ ಕಂಬಗಳು ಸದ್ಯಕ್ಕೆ ಬೇಕಾಗಿವೆ ಮತ್ತು ಅಗತ್ಯವಿದ್ದ ರಸ್ತೆಗಳಲ್ಲಿ ವಿದ್ಯುತ್ ಕಂಬದ ವ್ಯವಸ್ಥೆ ಮಾಡಲಾಗುವುದು.

– ಪ್ರಕಾಶ್ : ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಾ. ಎಲ್ಲರಿಗೂ ಧನ್ಯವಾದಗಳು ಆದರೆ ನನ್ನದು 2–3 ಪ್ರಶ್ನೆಗಳು: (1) ಚರಂಡಿಗಳಿಗೆ ಔಷಧಿ ಸಿಂಪಡಿಸಬೇಕು. (2) ಫ್ಯಾಮಿಲಿ ಡೀಟೆಲ್ಸ್ ತೆಗೆದುಕೊಂಡಿದ್ದಿರಾ ಏನಾಯಿತು? (3) ಜನವರಿ 26 ರಂದು ಅಂಬೇಡ್ಕರ್ ಫೋಟೋ ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು ಮತ್ತು ಸಂಡೇ ನೈಟ್ ನೀರು ಬಿಡುವುದಾಗಿ ಚೆನ್ನಪ್ಪ ಹೇಳಿದ್ದರು. ಬಿಟ್ಟಿಲ್ಲ.

– ಕಾರ್ಯದರ್ಶಿಗಳು : ಚರಂಡಿಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಔಷಧಿ ಸಿಂಪಡಿಸಲಾಗುವುದು. ಸಂಘದಿಂದ ನಡೆಸುವ ಜನವರಿ 26 ರ ಕಾರ್ಯಕ್ರಮದಲ್ಲಿ ಈ ಹಿಂದೆಯೂ ಸಹ ಭಾರತಾಂಬೆಯ ಫೋಟೋ ಹೊರತು ಪಡಿಸಿ ಬೇರೆ ಫೋಟೋಗಳನ್ನು ಇಟ್ಟಿಲ್ಲ. ಪ್ರತಿ ಮನೆಯಲ್ಲೂ ಬಾವುಟಾ ಹಂಚಿ.

– ದೀಪಕ್ ವಿಠಲ್ : 2020 ರಲ್ಲಿ ಸೌಂದರ್ಯ ಭೂಷಣ, ಸೌಂದರ್ಯ ವಿಭೂಶಣ, ಸೌಂದರ್ಯ ರತ್ನ ಎಲ್ಲಾ ಪ್ರಶಸ್ತಿಗಳಿತ್ತು, ಅದನ್ನು ಏಕೆ ನಿಲ್ಲಿಸಿದ್ದಿರಿ.

– ಅಧ್ಯಕ್ಷರು : ಇದರ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆ.

9. ಅಧ್ಯಕ್ಷರ ಭಾಷಣ :–

ಸಂಘವು ಮುಂದಿನ ವರ್ಷದಲ್ಲಿ ಸಾಧಿಸ ಬೇಕೆಂದಿರುವ ಗುರಿ ಮತ್ತು ಧ್ಯೇಯಗಳ ಬಗ್ಗೆ ಸಭೆಗೆ ವಿವರಿಸಿದರು. ಮುಂದಿನ ಸಾಲಿನಲ್ಲಿ ನಮ್ಮ ಸಂಘದ ಬೈಲಾವನ್ನು ಇನ್ನೂ ಉತ್ತಮಗೊಳಿಸುವ ನಿಟ್ಟಿನಲ್ಲಿ ಮತ್ತು ಅದರಲ್ಲಿರಬಹುದಾದ ಲೋಪದೋಷಗಳನ್ನು ಸರಿಮಾಡುವ ಉದ್ದೇಶದಿಂದ, ಸಂಘದ ಬೈಲಾವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಅಗತ್ಯವಿರುವ ನಿಯಮಗಳ ತಿದ್ದುಪಡಿ ಕರಡನ್ನು ರಚಿಸಿ ಆ ಮೂಲಕ ಸಂಘವನ್ನು ಮತ್ತು ನಮ್ಮ ಬೈಲಾವನ್ನು ಸಧೃಡ ಪಡಿಸಲಾಗುವುದು. ಈ ಉದ್ದೇಶಕ್ಕಾಗಿ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಿ, ತಿದ್ದುಪಡಿ ಕರಡು ರಚಿಸಿ, ಆ ತಿದ್ದುಪಡಿಗಳ ಸಾಧಕ–ಬಾಧಕಗಳನ್ನು ಪರಾಮರ್ಶಿಸಿ–ಅವಲೋಕಿಸಿ ಮತ್ತು ಸಂಘದ ಸದಸ್ಯರ ವಿಶೇಷ ಸರ್ವ ಸದಸ್ಯರ ಸಭೆ ಕರೆದು ನಿಮ್ಮೊಂದಿಗೆ ಚರ್ಚಿಸಿ, ನಿಮ್ಮೆಲ್ಲರ ಸಲಹೆ–ಸೂಚನೆಗಳನ್ನು ಪಡೆದು, ಅಗತ್ಯ ಮಾರ್ಪಾಡುಗಳನ್ನು ಮಾಡಿ ತಿದ್ದುಪಡಿ ಕರಡನ್ನು ಅನುಮೋದನೆಗಾಗಿ ನಿಮ್ಮ ಮುಂದೆ ಮಂಡಿಸಿ ಸಂಘದ ಬೈಲಾವನ್ನು ಇನ್ನೂ ಸಧೃಡ ಮಾಡಲು ಪ್ರಯತ್ನಿಸುತ್ತೇವೆ.

ಪ್ರಸ್ತುತ ನಮ್ಮ ಸಂಘದ ಕಟ್ಟಡವನ್ನು ಸಂಬಂದ ಪಟ್ಟ ಸರ್ಕಾರಿ ಕಛೇರಿಯಿಂದ ಸಂಘದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ಅಗತ್ಯವಾದ ಕೆಲಸಗಳನ್ನು ಮಾಡುತ್ತೇವೆ.

ಸಂಘದಿಂದ ನಮ್ಮ ನಿವಾಸಿಗಳಿಗೆ ಮತ್ತು ಸುತ್ತಮುತ್ತಲಿನ ಬಡಾವಣೆಯ ನಿವಾಸಿಗಳ ಆರೋಗ್ಯ ಸೇವೆಗಾಗಿ, ಉಚಿತ ವೈಧ್ಯಕೀಯ ಸೇವೆ ಒದಗಿಸಲು ಪ್ರಯತ್ನಿಸುತ್ತೇವೆ ಹಾಗೂ ನಮ್ಮ ಸುತ್ತಮುತ್ತಲಿರುವ ಡಯೋಗ್ನೈಸ್ ಸೆಂಟರ್‌ಗಳಿಂದ ಮತ್ತು ಮೆಡಿಕಲ್ ಸ್ಟೋರ್‌ಗಳಿಂದ ರಿಯಾಯಿತಿದರಲ್ಲಿ ಆರೋಗ್ಯ ತಪಾಸಣೆ ಮತ್ತು ಔಷಧಿಗಳನ್ನು ಸದಸ್ಯರಿಗೆ ಒದಗಿಸಲು ಪ್ರಯತ್ನಿಸುತ್ತೇವೆ.

ಸಂಘದ ಲೆಕ್ಕಪತ್ರಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುತ್ತೇವೆ ಮತ್ತು ಅನಗತ್ಯ ಖರ್ಚುಗಳನ್ನು ನಿಯಂತ್ರಿಸುತ್ತೇವೆ.

ನಮ್ಮ ನಿವಾಸಿಗಳ ನಡುವೆ ಸೌಹಾರ್ದಯುತ ಭಾಂದವ್ಯ ವೃದ್ಧಿಗೆ ಬೇಕಾದ ವಾತಾವರಣ ನಿರ್ಮಿಸಲು ಅಗತ್ಯವಾದ ಎಲ್ಲಾ ಕಾರ್ಯಗಳನ್ನು-ಕಾರ್ಯಕ್ರಮಗಳನ್ನು ಏರ್ಪಡಿಸುತ್ತೇವೆ.

ಸದಸ್ಯರ ಮತ್ತು ನಿವಾಸಿಗಳ ಎಲ್ಲಾ ಸಮಸ್ಯೆಗಳಿಗೆ ಸಕರಾತ್ಮಕವಾಗಿ ಸ್ಪಂದಿಸುವ ಭರವಸೆ ನೀಡುತ್ತೇವೆ ಮತ್ತು ನಮ್ಮ ಇತಿಮಿತಿಯಲ್ಲಿ ನಿಮ್ಮ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಹಾಗೆಯೇ, ನಮ್ಮ ಎಲ್ಲಾ ಪ್ರಗತಿಪರ ಕಾರ್ಯಗಳಿಗೆ ಮತ್ತು ರಚನಾತ್ಮಕ ಸಮಾಜ ಮುಖಿ ಕೆಲಸಗಳಿಗೆ ನಿಮ್ಮಿಂದ ಧನಾತ್ಮಕವಾದ ಪ್ರತಿಕ್ರಿಯೆಯನ್ನು ಎದುರು ನೋಡುತ್ತೇವೆ. ಧನ್ಯವಾದಗಳು.

10 **ವಂದನಾರ್ಪಣೆ :** ಶ್ರೀ ಮನೋಹರಸಿಂಗ್ ರವರು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ರುಚಿಕರವಾದ ಭೋಜನದ ವ್ಯವಸ್ಥೆ ಮಾಡಲಾಯಿತು ಮತ್ತು ಇದರೊಂದಿಗೆ ಸಭೆ ಮುಕ್ತಾಯ ಗೊಂಡಿತು.

ಅಧ್ಯಕ್ಷರು

ಪ್ರಧಾನ ಕಾರ್ಯದರ್ಶಿ

# Minutes of the 18th Annual General Body Meeting

**General:**
The 18th Annual General Body Meeting of Soundaryanagar Welfare Association was held on 31-07-2022 Sunday.

**Inauguration:**
The required quorum was not registered at the scheduled time of 10.00 A.M. as per the clause 8.3 of SWA bye-laws, the meeting was adjourned by another 60 minutes and began at 11.00 A.M by the following programmes

The meeting was addressed by KarthiK Bhojraj

1. Sarvaji Bhat rendered the invocation song
2. Welcome address by Mr. Karthik Bhojraj.
3. **Mourning:** A minute of silence was observed in memory of our Late members and for family members who had passed away during the last year.
4. **Approval of Audited Accounts:** Mr. Suhas S Koushik, Treasurer of the Association presented the audited financial statements of the year 2021-22 and the photocopies of the same were distributed among the present members for approval. After the discussions, the members present in the General Body Meeting approved the statement of Accounts.

   Discussions/Observations with regard to the Audit Report by AGM are as follows:
   a. As per the Audit report, a sum of Rs.10,14,000/- which was in the name of Association, after the maturity of the cash certificate it was transferred to the joint account of Ex-President Sri. Mudalagiriyappa and Sri. Manjappa P. This was noted as Loan towards Ex-President in the audit report. The amount which matured on 08-03-2022 has not been reflected anymore in the association account.
   b. Receipt Book Number 31&32 (3001-3200) were not presented to the auditor at the time of audit. The Association has no knowledge about the where about of the aforesaid receipt books.
   c. The members expressed to debate on the above points.
   d. Ex Treasurer Sri. Yuvaraj informed that missing receipt books 31 & 32 is in the custody of Sri. Manjappa and Rs.10,14,000/- has been donated to Temple trust of Soundarya Layout.
   e. Mr. Arun Marathe – How can such a big amount be transferred to individual names. Are there any powers in the Byelaw for such an action?

President updated that there are no such rules/powers to transfer or to give loan of any amount to any individuals.
Mr. Arun Marathe - How did that amount come to the Association account.
President - As there was a problem with the sites, an amount of Rs.25,000/- was collected from each site to execute the rectification deed. Out of which Rs.8,96,400/- remained as excess. This amount was kept in Soundarya Souhardha Bank in the name of the Association. The interest derived from this amounted to Rs.10,14,000/-.
Arun Marathe - when there was a separate formed to look after the site issue, why was the money transferred to Association account?
President - a meeting of the site owners was called in which Sri Manjappa also attended in which there was a resolution passed that the remaining amount will be transferred to Soundarya Temple Trust.
Arun Marathe - This is like the National Herald Case. This is not handled properly.
Mr. Yuvaraj – Money is not misappropriated.
President - pacified both the members and explained that Sri. Arun Marathe just given an example to the situation.
Mangala Vaze - Insisted that the remaining money should be given back.
President – informed that there is no point in asking the money now. It should have been asked in the site committee meeting.
NSV Subbanna – This has tarnished the image of our Association.
Manjunath Bhat – The proper protocols were not followed and lack of proper information with the previous committee, it reflects that a sum of Rs.10,14,000/- was forcefully taken from the association. Apart from that the interest derived from the money should rightfully belongs to the association. Unilateral decision was taken in this regard and the interest derived should returned to the association.
President – Yes according the report, the TDS has been deducted from the association.
Yuvaraj – FD, Interest and regarding the receipt books, we will call Sri. Manjappa for a meeting.
Manjunath Bhat – clarity on the receipt book is required.
President – will discuss with the Auditor with regards to the interest derived from the FD. Will call a meeting of previous office bearers to discuss about the said issue.
Manjunath Bhat – Rs.8,96,400/- and interest of Rs.4,000/- has been deducted from the association account.
President – We will discuss with the auditor regarding this.
NSV Subbanna - Why did the money transferred to Ex-President name. previously Swajaladhara fund was also merged with the

association account. But the then office bearers issued a valid receipts for the same. Why did this was not followed.

Yuvaraj – the two missing receipt books is with the Ex-president. He will submit to the association.

Manjunath bhat – there is no bifurcations in the audit report. There is no proper information with regard to New and old members.

President – We will discuss with the auditor regarding this.

Manjunath Bhat – As per the byelaw and rules of Society act, once the elections are announced, the office bearers will become only care takers and they should not handle association money. The previous office bearers have not followed the proper procedures.

NSV Subbanna – this development has bought great pain to the members

President – Will discuss with the Ex- Office bearers regarding the missing receipt books and we assure you all that in due course this all the procedures will duly followed with transparency.

Manjunath Bhat – what will you do if the audited amount changes. How will you face the consequences.

President – if there is any changes we will call for a special General body meeting.

NSV Subbanna – need to discuss about the confirmation deed.

Manjunath Bhat – Along with confirmation deed, individual EC to the members was assured. Along with all the mother title deeds of the layout which was to be handed over to the association as promised by Sri. Manjappa. What is the status of the same?

President – we will discuss with Manjappa P and ensure that locker is opened in the association name and all the documents will be kept in the locker for further use. If any members requests for a EC, the association will ensure that the due will be taken care.

Deepak Vittal – What happened to the Survey amount. Need details with regard to this.

Manjunath Bhat – Rs.500 and 1000 were taken for the survey

Srinivas – With 2 receipt books missing how can an audit report be considered valid and passed.

Arun Marathe – with regards to previous money transaction and the missing receipt books, previous office bearers are answerable.

President – we will discuss with the previous office bearers for any problems arising with respect to the accounts.

It was decided by the AGM to appoint Bargeshappa and Co as our auditor.

**General Secretary's Report by Dr B Somashekar:**

Dr Somashekar displayed the all works in the form of Videos and pictures through projector and explained in details to the AGM:

- Total 142 lights were repaired

- 66 new lights were installed
- 8 new electric poles were installed
- Twisted cable was put for 11KV open wire

**Open House:**

NSV Subbanna – Need to increase the number of CCTV cameras
President – Will look into the matter and CCTV for 14th 1st ABC along with Gundappa Layout will be taken up shortly.

Vasanth Kumar – UGD chamber has gone below the road level
Secretary – It will be rectified
President – Have discussed with L&T and will ensure this will not repeated in the other roads. We have given them a list of chambers which have gone down and it will be rectified.

Basavaraj C – 14th ABC name plates mistake has happened. Kindly rectify.
President – this issue will be rectified at the earliest.

NS Manjunath – box shape drainage has not been done in the 2nd main road.
Secreatry – will discuss this with BBMP

Deepak Vittal – Road sweepers are not coming regularly. They should attend every road 15 days once.
President – will implement a proper time table.

Srinivas Rao – the culvert of 3rd main Siddeshwara Layout has been closed.
Secretary – Will open the closed culvert as soon as possible
Deepak vital – What happened to Soundary Giri? JCB came and went.
Secretary – Since the said place is coming under Airforce Buffer zone, Soundarya Giri programme may not happen.

Mangala Vaze – Please specify a date and time for Cauvery water
Secretary – already a day has been fixed. Will try to get 2 days of water a week, as this is a trial basis.

Narasimha – college drain has been released on 1st A 14th cross. A huge amount of water is coming out of college which is causing the major problems.
Secretary – will speak with the BBMP regarding the outflow of the water

Hema Prakash – wanted to draw your attention to our cultural programmes. There was a clause that minimum 5 participants required for any of the programme. Why should only 2 participants be not allowed. The programme with Rajyotsava was not informed to us. Provide equal opportunity to everyone.

President – during our Rajyotsava we did not get suitable time and our Vice president who was the incharge of the programme tried calling your daughter with regard to the programme.
Hema Prakash – No we did not receive any phone calls
President – Vice president has called Shivaraj daughter, Padke daughter and Anusha siddesh and everybody participated in the previous programme. If in case by oversight if you have not received phone call, we apologies for the same. We will ensure that this type of miscommunication will not happen in future. And with regards to the minimum of 5 participants per programme this decision was taken upin the executive committee meeting and ths decision is not an single indivual decision .
Hema Prakash- we did not have information about this development
President- when the association informed that minium 5 people has to be their per programme noboday came forward that is why this decision was taken
Hema Prakash- I was asked to sing only in the last
Asha yuvraj- for the November 1st function we were not sure whether to sing with karoke or without karoke in the month of june the postponend republic day programme did not happen will it happen this year .

President – the republic day function did not happen due to corona restrictions in place by the government, in all our previous programme we had used karoke to sing songs but to perform with live music requires musician who are quite expensive and this did not fit our current budget, however in future if threr is a chance we will use live music for the time being we will continue to sing with karoke only.

Asha yuvaraj – as there is an increase in the traffic due to the school buses please design a one way traffic fir the school buses to commute .

Secretary –will communicate with the school authorities with regards to this matter and will also give a letter with regards to road humps to the traffic police .

Ravi raj 14 th cross 1st c main – people are digging the 1st main road again please look into the matter as it will cause problems.

President – the bbmp are constructing a chamber for the borewells thr road will be rectified after the construction processes

Srikanth bhat- any information about rajakaluve

Secretary- as of noe no new information on rajakaluve is available .

Basavaraj c – the costruction lorries ply only after 10 in the night and also there is lot of noise from the school in the night

Secretary –if there is noise cmng after 10 pm we will communicate with the college authorities

President- have spoken with the college authorities to abide by the government guide lines with regards to the use of loud speakers , when there is road construction and when heavy vehicals ply on that road pipes will get damaged if it happens we will get it repaired from the concerned authorities.

Nagabhushan – 1st main road there is an lot of drain issues.

President- will insist with the bbmp , MLA to construct box shaped drains on 1st&2nd main roads.

Ravikumar- street dogs are causing lot of problems.

Secretary – every Thursday dog catchers visite our area unfortunately there are not able to catch many dogs and the government polices with regards to this issue keeps changing however will inform thebbmp about this issue.
Manjunath 2nd main 2nd cross- the dog litter filth on the roads.

Secretary – it's the duty of the dog owner to clean the filth.

Roopa 1st main 7th cross as our house is located below the road level rain water gushes into our house

Secretary- please consult a good civil contractor and get a proper planning done for the smooth flow of the rain water.

Harsha 2nd main 9th cross there is a problem with the chamber how to join swa association is there a notice board .

Secretary- there is a notice board at 1st main 7th cross however it need some repair work since the advent of the social media the association has been using watsapp for its communications.

Shashikanth udupa – water pipe damaged in our road.

Secretary- will get it repaired.

D H Gowda – twisted cables are hanging loosely .

Paresh Shetty joint –secretary – the bescom will put extra poles for loose haning poles in the near future 8 to 10 additional poles will be put up .

Vivek shanbag- please plant trees for the vanamothsava programme .

Ashok kumar 2nd main there is no poles as well as street lights for out entire street we have been trying to get new poles but has not materialized so far

President – as of now 8-10 new additional poles have been put up will try for few new poles and get the lights done .

Prakash- appreciate the good work done so far I have 3 points 1- mosquito spray has to be sprayed to the open drain 2- ambedekar photo should have been kept for the republic day function 3- kaveri water was promised on Sunday night it was not let .

Secretary – the mosquito spraying will be intimated to the health inspector in our previous republic day programme except bharathmata photo nothing else was kept .

Deepak vittal- 2020 soundarya bhushana soundarya Vibhushan soundarya rathna awards are stopped why .

Secretary- we will take a decision into this matter during the coming days.

President's speech – the president Mr .M.V.Murthy explained in detail about the vision of the association he informed that a special committee will be formed to re-draft our our bye-laws which are 20 years old , a special AGM will be called for this purpose ,

To initiate means and measurers to have our own building

For the welfare of our members and other residents of surrounding layout will set up a health clinic .

Will ensure proper utilization of members funds for beneficial purposes of our members and their families

Will maintain transparency in our accounts .

Ensure bonhomie among all our members.

Will respond to all the problems of our members in a positive manner ,

Also expect positive response from all our members for all the good initiatives taken up by the association .

Vote of thanks – Mr. Manohar singh thanked all the participants for their active participation .

LUNCH WAS ARRANGED FOR ALL MEMBERS .

PRESIDENT GENERAL SECRETARY .

**Presidents Address:**

The President answered the queries raised in open house and also informed about the programmes conducted by the association and also intended programmes to be conducted in future.

**Vote of Thanks:**

Sri. Venkatesh Prasad Bhat, Vice President delivered the vote of thanks.

President General Secretary